ಕಲ್ಯಾಣ ಕಿರಣ

ಏಪ್ರಿಲ್ - 2005

ಬೆಲೆ : ರೂ. 5-00

Digitalized by e-Sahithya Documentation Forum
Sponsored by Sarayu Foundation Trust

ಬಳ್ಳಾರಿಯಲ್ಲಿ ಉತ್ಸವದ ಮಹಿಳಾ ಜಗದ್ಗುರುಗಳಿಗೆ ಶರಣ ಶರಣೆಯರಿಂದ ಪುಷ್ಪವೃಷ್ಟಿ, ಆರತಿ, ಅಭಿನಂದನೆ.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಸಂಪುಟ 35 ಬಸವ ಶಕೆ 871 ಆಜೀವ ಸದಸ್ಯತ್ವ 500/-ರೂ

ಸಂಚಿಕೆ 13 ಏಪ್ರಿಲ್ 2005 ವಾರ್ಷಿಕ ಚಂದಾ 50/-ರೂ

ನುಡಿ ನೈವೇದ್ಯ

ಕಲ್ಯಾಣದ ಕರೆ ಕಲ್ಯಾಣಕೆ ಕರೆ

ಕಲ್ಯಾಣ ಕರೆದಿದೆ ಕಲ್ಯಾಣ, ಗುರು ಬಸವಣ್ಣನ ಕಲ್ಯಾಣ
ಶರಣರಾಡಿದ ಕಲ್ಯಾಣ, ವಿಶ್ವಕೆ ಬಯಸುತ ಕಲ್ಯಾಣ ||ಪ||

ಭಾರತ ಮಾತೆಯ ಮುಕುಟ ಕಾಶ್ಮೀರ, ಪಾವನ ಪಾದವು ಕನ್ಯಾಕುಮಾರಿ
ದೇಶ ವಿದೇಶದ ಮೂಲಗಳಿಂದ ಶರಣರ ಕರೆದಿದೆ ಕಲ್ಯಾಣ ||ಅ.ಪ||

ಗುರು ಬಸವಣ್ಣನ ಪ್ರಭೆಯನು ಬೆಳಗಲು ಪ್ರಣತೆಯಾಯಿತು ಕಲ್ಯಾಣ
ಸತ್ಯದ ಶೋಧಕ ಸಾಧಕರೆಲ್ಲರ ಅರಿವಿನ ನೆಲೆಯಾಯ್ತು ಕಲ್ಯಾಣ ||1||

ಕಾಯಕವೇ ಕೈಲಾಸವೆಂದು ಸಂದೇಶ ಸಾರಿದ ಕಲ್ಯಾಣ
ದಯವೇ ಧರ್ಮದ ಮೂಲವೆಂದು ಪ್ರೇಮವ ಮೆರೆದ ಕಲ್ಯಾಣ ||2||

ನಾಡ ಬಲ್ಲಿದರೆಲ್ಲ ಕೂಡಿದರಂದು ಸೂಡ ಕಟ್ಟಿದರು ವಚನಗಳ
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ ಸಮತೆಯ ಸಾರಿತು ಕಲ್ಯಾಣ ||3||

ಅಲ್ಲಮಪ್ರಭುದೇವ ಅಕ್ಕಮಹಾದೇವಿ ಚಿನ್ಮಯಜ್ಞಾನಿ ಚನ್ನಬಸವಣ್ಣ
ಸಿದ್ಧರಾಮೇಶ್ವರ ಮಡಿವಾಳ ಮಾಚಯ್ಯ ಮಹಾಮನೆ ಹೊಂದಿದ್ದ ಕಲ್ಯಾಣ ||4||

ಹರಳಯ್ಯ ಮಧುವಯ್ಯ ಮೋಳಿಗೆ ಮಾರಯ್ಯ ನೀಲಮ್ಮ ನಾಗಮ್ಮ ಶರಣೆಯರು
ಅಂಬಿಗರ ಚೌಡಯ್ಯ, ಮೇದಾರ ಕೇತಯ್ಯ, ಒಕ್ಕಲಿಗ ಮುದ್ದಣ್ಣನ ಕಲ್ಯಾಣ ||5||

ಅನುಭವ ಮಂಟಪ ರಚಿಸಿದರಂದು ಅನುಭಾವ ಗೀತೆಯ ಹಾಡಲಿಕೆಂದು
ವಚನ ಪುಷ್ಪಗಳ ಬಂಡನು ಸವಿಯಲು ಧಾವಿಸಿ ಬಂದಿತು ಶರಣರ ದಂಡು ||6||

ಬನ್ನಿರಿ ಶರಣರೆ ಬಸವ ಕಲ್ಯಾಣಕೆ ಬಸವ. ಮಹಾಮನೆ ಕಟ್ಟುವ ಬನ್ನಿ
ತನುಮನಧನಗಳ ಧಾರೆಯನೆರೆದು ನವ ಕಲ್ಯಾಣವ ನಿರ್ಮಿಸ ಬನ್ನಿ ||7||

ಕಲ್ಯಾಣ ಪರ್ವದಿ ನಲಿಯುವ ಬನ್ನಿ, ಕ್ರಾಂತಿಗೀತೆಯ ಹಾಡುವ ಬನ್ನಿ
ಶರಣರ ಋಣವನು ತೀರಿಸ ಬನ್ನಿ, ಬಸವಾತ್ಮಜೆಯ ಬಿನ್ನಹವಿದುವು ||8||

-ಬಸವಾತ್ಮಜೆ

Digitalized by e-Sahithya Documentation Forum
Sponsored by Sarayu Foundation Trust

★ ಕಲ್ಯಾಣ ಕಿರಣ ★

ಸಂಪುಟ 35 | ಬಸವ ಶಕೆ 871 | ಆಜೀವ ಸದಸ್ಯತ್ವ 500ರೂ

ಸಂಚಿಕೆ 3 | ಏಪ್ರಿಲ್ 2005 | ವಾರ್ಷಿಕ ಚಂದಾ 50/-ರೂ.

ಲೇಖನಗಳು	ಕಿರಣ ಗನ್ನಡಿ ಲೇಖಕರು	ಪುಟ
1.ಕಲ್ಯಾಣದ ಕರೆ ಕಲ್ಯಾಣಕೆ ಕರೆ	ಮಾತಾಜಿ	-3
2.ನಾಲ್ಕನೆಯ ಕಲ್ಯಾಣ ಪರ್ವಕ್ಕೆ ಆಹ್ವಾನ	"	-5
3.9ನೆಯ ಶತಮಾನೋತ್ಸವ?!-ಸಂಪಾದಕೀಯ	ಮಾತಾಜಿ	-8
4.ಶರಣಮೇಳ ಹಾಗೂ ಕಲ್ಯಾಣ ಪರ್ವಕ್ಕೆ ಕರೆ	ಸರೋಜಮ್ಮ ನಾಗರಾಜು	-9
5.ಧರ್ಮಪಿತರ ಕರೆಯೋಲೆ	"	-10
6.ವಚನ ಚಿಂತನ	"	-14
7.ಸಮಸ್ಯೆ-ಸಮಾಧಾನ	"	-16
9.ಎನ್ನ ಪ್ರಭುದೇವರು(ವಚನ ವ್ಯಾಖ್ಯಾನ)	ಮಾತಾಜಿ	-22
10.ಭಾವಲಿಂಗ ಪೂಜೆ (ಅಕ್ಕಮಹಾದೇವಿ) ವಚನ ವ್ಯಾಖ್ಯಾನ	ಮಾತಾಜಿ	-24
12. ಮಾತೆಯನ್ನು ಕುರಿತು ನುಡಿನಮನ	ವಿಜಯಾ ರಾಜು, ರಾ.ಬ.ದಳ	-27
13.ಆದಿ ಶರಣರ ಸ್ತೋತ್ರ	ಮಾತಾಜಿ	-31
14.ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಅಕ್ಕನ ಜಯಂತಿ ಆಚರಣೆ	"	-40
15.Path of Sharanas : Concept of Samsara	Yogishwari U.S.A	-41
16.ಜ್ಞಾನ ತರಂಗಿಣಿ(ಕವನ)	ನಿರ್ಮಲಾ ಪ್ರಭಾಕರ್	
ಶರಣ ಮಾತೆಯ ಊರಾವುದು(ಕವನ)	ಕೆ.ವೀರೇಶ್ ಕುಮಾರ್	-50

24-4-2005ರಂದು ಬಂದಿರುವ

ಅಕ್ಕಮಹಾದೇವಿ ಜಯಂತಿಯ ಶುಭಾಶಯಗಳು

11-5-2005ರಂದು ಬಂದಿರುವ

ಬಸವ ಜಯಂತಿಯ ಶುಭಾಶಯಗಳು

KALAYANA KIRANA-Reg No.19988/70. Monthy Magazine printed and published by B. Shambulingaiah, at Prabhudeva Printing Press, Basava Gangotri, Kumbalagodu,Bangalore-560074.

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಕಾಯಕ ದಿನದ ಅಂಗವಾಗಿ ನಾಲ್ಕನೆಯ

ಕಲ್ಯಾಣ ಪರ್ವ

2005 ರ ಮೇ 1, 2 ಮತ್ತು 3 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ - ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 18ನೆಯ ಶರಣ ಮೇಳವು ಇದೇ ತಾನೆ ಯಶಸ್ವಿಯಾಗಿ ಜರುಗಿದೆ.

ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ, ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮ ನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ" ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು. ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿದೆ. ನಾಲ್ಕನೆಯ ಕಲ್ಯಾಣ ಪರ್ವವನ್ನು 2005ನೆಯ ಇಸವಿಯ ಮೇ 1,2 ಮತ್ತು 3 ರಂದು ಬಸವ ಮಹಾಮನೆಯ ಆವರಣದಲ್ಲಿ ಸಂಯೋಜಿಸಲಾಗಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು (ಕಲ್ಯಾಣ). ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು.

Digitalized by e-Sahithya Documentation Forum
Sponsored by Sarayu Foundation Trust

ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು" ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಏಪ್ರಿಲ್ 30ರ ರಾತ್ರಿಯಿಂದ ಮೇ 4ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1.ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು	4. ಹಿತೈಷಿಗಳು	: 500 ರೂ
2.ಪೋಷಕರು	: 2000 ರೂ ಮತ್ತು ಮೇಲೆ ಕೊಟ್ಟವರು	5. ಸ್ವಾಗತ ಸಮಿತಿ ಸದಸ್ಯತ್ವ	: 250 ರೂ.
3. ದಾನಿಗಳು	: 1000 ರೂ ಮತ್ತು ಮೇಲೆ ಕೊಟ್ಟವರು	6. ಪ್ರತಿನಿಧಿ ಶುಲ್ಕ	: 100 ರೂ.

ಅನ್ನ ದಾಸೋಹಕ್ಕಾಗಿ ಧಾನ್ಯ, ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ : ವಾರ್ಷಿಕ ಸಮಾವೇಶವಾದ ಕಲ್ಯಾಣ ಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು(F.D) ಇಡಲು ದೇಣಿಗೆ ನೀಡಿದರೆ ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ(ರಿ.) ಟ್ರಸ್ಟ್‌ವತಿಯಿಂದ ಬಸವ ಕಲ್ಯಾಣದಲ್ಲಿ ಶರಣಸಂಸ್ಕೃತಿಯ ಪುನರುತ್ಥಾನಮಾಡಬೇಕೆಂದು ಸಂಕಲ್ಪಿಸಿ ದಿ:21-12-2001ರಂದು ರಾಷ್ಟ್ರೀಯ ಹೆದ್ದಾರಿ 9ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದು ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಕೆಳಗಿನಂತೆ ಅವಕಾಶವಿದೆ.

1. ನಿತ್ಯ ಪೂಜಾ ನಿಧಿ : ಶ್ರೀ ಗುರು ಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ : ದಾನಿಗಳ ಹೆಸರಿನಲ್ಲಿ ಪೂಜೆಯನ್ನು ಮಾಡಿ ಪ್ರಸಾದವನ್ನು ದಾಸೋಹಿಗಳ ಮನೆಗೆ ಕಳಿಸುವುದು. 600 ರೂ.
2. ದಾಸೋಹ ನಿಧಿ : ದಾಸೋಹಿಗಳು ಕೊಡುವ ಹಣವನ್ನು ನಿಧಿಯಾಗಿ ಇಟ್ಟು ಅವರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು. ಮತ್ತು ಪ್ರಸಾದವನ್ನು ಕಳಿಸುವುದು. 1200 ರೂ.
3. ಬಸವ ಮಂಟಪ ನಿರ್ಮಾಣ : ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ, ಭವ್ಯವಾದ ಪ್ರಾರ್ಥನಾ ಮಂದಿರ ಕಟ್ಟುವುದು.'ಬಸವ ಮಂಟಪ' ನಿರ್ಮಾಣಕ್ಕೆ 10,000 ರೂ. ಮತ್ತು ಮೇಲೆ ದೇಣಿಗೆ ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು.
4. ಬಸವ ಧ್ಯಾನ ಮಂಟಪ : ಬಸವ ಕಲ್ಯಾಣದಲ್ಲಿ ಲಭ್ಯವಿರುವ ಲಾಟರೈಟ್ ಶಿಲಾಪದರ ಬಳಸಿಕೊಂಡು ಗವಿಯನ್ನು ಕೆತ್ತಿಸುವುದು.
5. ಶರಣ ಧಾಮ : ಬರುವ ಯಾತ್ರಿಕರಿಗಾಗಿ ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 61,000 (ಅರವತ್ತೊಂದು ಸಾವಿರ) ರೂ. ಡಬ್ಬಲ್ ಕೋಣೆ ನಿರ್ಮಾಣಕ್ಕೆ 81,000 (ಎಂಬತ್ತೊಂದು ಸಾವಿರ) ರೂ.ದಂತೆ ದಾನಿಗಳಿಂದ ಪಡೆಯಲಾಗುವುದು. ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 1,50,000 (ಒಂದು ಲಕ್ಷ ಐವತ್ತು ಸಾವಿರ) ರೂ.ಗಳು
6. 108 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ : ಅಂದಾಜು ವೆಚ್ಚ 1.5 ಕೋಟಿ ರೂಪಾಯಿಗಳು. ರೂ. 11,000 ಮತ್ತು 25,000 ರೂ ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನಲ್ಲಿ ಬರೆಸಲಾಗುವುದು. ರೂ. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದು. ಒಂದು ಲಕ್ಷ ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದಲ್ಲದೆ ಅವರ ಭಾವಚಿತ್ರವನ್ನು ಹಾಕಲಾಗುವುದು. 2004ರ ಸೆಪ್ಟಂಬರ್ 1 ರಂದು ಬೃಹತ್ ಬಸವ ಪುತ್ಥಳಿಯ ನಿರ್ಮಾಣಕ್ಕೆ ನಾಂದಿ ಪೂಜೆ ನೆರವೇರಿಸಲಾಗಿದೆ.
7. ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲಿನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ. ಜನರ ನೆರವು ಸಿಕ್ಕಿದಂತೆ ಇನ್ನೂ ಹಲವಾರು ಯೋಜನೆಗಳನ್ನು ಹಾಕಲಾಗುವುದು. ಈಗಾಗಲೇ ಕೊಳವೆ ಭಾವಿ ಮತ್ತು ತೆರದ ಭಾವಿ ತೋಡಿಸಲಾಗಿದೆ. ನೀರಿನ ಟ್ಯಾಂಕ್‌ಗಳು, ಕಾರ್ಯಾಲಯ ಕಟ್ಟಡ, ಬಸವಾಲಯ ಪೂರ್ಣಗೊಂಡಿವೆ. ಆದ್ದರಿಂದ ಸಹೃದಯರು ಆದಷ್ಟು ಬೇಗನೆ ಉದಾರವಾಗಿ ಕಾಣಿಕೆಯನ್ನು ಸಲ್ಲಿಸಿ ಕೆಲಸವು ತ್ವರಿತಗತಿಯಲ್ಲಿ ಸಾಗುವಂತೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ ಶರಣ ಬಂಧುಗಳೇ, ನಿಮ್ಮ ಗಳಿಕೆಯ ಒಂದು ಪಾಲನ್ನು ಗುರು-ಲಿಂಗ-ಜಂಗಮದ ದಾಸೋಹಕ್ಕೆ ಸಲ್ಲಿಸುವುದು ನಿಮ್ಮ ಆದ್ಯ ಕರ್ತವ್ಯವೆಂದು ತಿಳಿದು ಉದಾರವಾಗಿ ಕಾಣಿಕೆ ಸಲ್ಲಿಸಿರಿ. ಬಸವ ಧರ್ಮ ಪೀಠದ ಧ್ಯೇಯೋದ್ದೇಶ ಪೂರೈಕೆಗೆ ನೀವು ಸಲ್ಲಿಸುವ ಕಾಣಿಕೆಯನ್ನು ಕೆಳಗಿನ ಮೂರು ವಿಳಾಸಗಳಲ್ಲಿ ಯಾವ ವಿಳಾಸಕ್ಕೂ ಕಳಿಸಬಹುದು.

ಸಂಪರ್ಕಿಸುವ ವಿಳಾಸಗಳು

ಬೆಂಗಳೂರು ವಿಳಾಸ: ಬಸವ ಧರ್ಮ ಪೀಠ(ರಿ.)
ಬಸವ ಮಂಟಪ, 2035, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
☎ : 080- 23325335/23322790

ಬಸವ ಧರ್ಮ ಪೀಠ (ರಿ.)
ಮಹಾಮನೆ ಮಹಾಮಠ, ಕೂಡಲ ಸಂಗಮ-
567115, ತಾ-ಹುನಗುಂದ, ಜಿ-ಬಾಗಲಕೋಟೆ.
☎ : 08351-268007/268038

ಬಸವ ಧರ್ಮಪೀಠ(ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585327
ತಾ-ಬಸವಕಲ್ಯಾಣ, ಜಿ-ಬೀದರ್
☎ : 08481-251921/252856

Digitalized by e-Sahithya Documentation Forum
Sponsored by Sarayu Foundation Trust

ಸಂಪಾದಕೀಯ

9ನೆಯ ಶತಮಾನೋತ್ಸವ ?

ಒಂದು ದಿವಸ ಶರಣ ಅರವಿಂದ ಜತ್ತಿಯವರು ಫೋನ್ ಮಾಡಿ, ''ಇದೇನು, ಬಸವಣ್ಣನವರ 9ನೆಯ ಶತಮಾನೋತ್ಸವವನ್ನು ದೆಹಲಿಯಲ್ಲಿ ಮಾಡುವರಂತೆ. ಇದು ಹೇಗೆ ಸರಿ ?'' ಎಂದರು. ನನಗೂ ಸೋಜಿಗವೆನಿಸಿತು . ಯಾರು ಮಾಡುವವರು ? ಎಂದು ಕೇಳಿದೆ. 'ಚಿತ್ರದುರ್ಗದ ಶ್ರೀಗಳು.''ಎಂದರು ''ಹೌದಾ..... ಅವರು ಹಾಗೆಯೇ! ಎಲ್ಲರದೂ ಒಂದು ದಾರಿಯಾದರೆ ಅವರದ್ದೇ ಒಂದು ದಾರಿ.'' ಎಂದೆ. ಒಂದು ಸಲ ಶ್ರೀ ಆರ್.ಹೆಚ್.ಚಂದನಗೌಡರು ಹೇಳಿದರು ''ನಾವು ಒಂದು ವಿಶ್ವ ಬಸವ ಧರ್ಮ ಮಹಾಸಭಾ ಟ್ರಸ್ಟ್ ಮಾಡಿದ್ದೇವೆ. ಪುನಃ ಅದೇ ಹೆಸರಿನದು ನೀವು ಮಾಡಬೇಡಿ.'' ಎಂದು ಇವರುಗಳು ಮನವಿ ಮಾಡಿಕೊಂಡರಂತೆ . ''ಹಾಗಿದ್ದರೆ ನಮ್ಮ ಶ್ರೀ ಮುರುಘರಾಜೇಂದ್ರ ಶಿವಮೂರ್ತಿಸ್ವಾಮಿಗಳ ನೇತೃತ್ವದಲ್ಲೆ ಮಾಡಿರಿ .'' ಎಂದರಂತೆ ಅವರ ಅನುಯಾಯಿಗಳು.'' ಇಲ್ಲ, ಅದರಲ್ಲಿ ಮಠಾಧಿಶರ ಪಾತ್ರ ಹೆಚ್ಚು ಇಲ್ಲ ಡೆಮಾಕ್ರೆಟಿಕ್ ಇದೆ . ಎಂದಾಗ , ಶ್ರೀಗಳು '' ನಮ್ಮ ದಾರಿ ನಮಗೆ ನಿಮ್ಮ ದಾರಿ ನಿಮಗೆ .'' ಎಂದರಂತೆ . ಕಳೆದವಾರ ದಯಾನಂದ ಸ್ವಾಮಿಗಳು ಫೋನ್ ಮಾಡಿ , ಬಸವ ಧರ್ಮ ಸಮಾವೇಶ ಮಾಡುತ್ತಿದ್ದೇವೆ. ಸಹಕರಿಸಿರಿ ಎಂದು ಶ್ರೀ ಗಳನ್ನು ಕೇಳಿದಾಗ, ಅವರು ''ನಾವು ಮಾಡುತ್ತಿದ್ದೇವೆ. ನೀವೇಕೆ ಮಾಡಬೇಕು ? ಎಂದರಂತೆ . ತಾವೇ ಬಸವ ಧರ್ಮದ ರೂಹಾರಿಗಳು ಎಂಬಂತೆ ಮಾತಾಡಿದಾಗ ''ಅದು ಹೇಗೆ ? 1983 ರಲ್ಲಿ ಬಸವ ಧರ್ಮ ಸಮ್ಮೇಳನ ಶುರುವಾಗಿದೆ. 1992 ರಲ್ಲಿ ಬಸವ ಧರ್ಮ ಪೀಠ ಸ್ಥಾಪನೆಯಾಗಿದೆ .'' ಎಂದು ದಯಾನಂದ ಸ್ವಾಮಿಗಳು ಹೇಳಿದಾಗ, ''ಅದೆಲ್ಲ ಏನೇ ಇರಲಿ, ನಮ್ಮ ದಾರಿ ನಮಗೆ ನಿಮ್ಮ ದಾರಿ ನಿಮಗೆ '' ಎಂದರಂತೆ. ಅದ್ದರಿಂದ ಈ ಸ್ಲೋಗನ್ ಶ್ರೀಗಳಿಗೆ ಬಾಯಿಪಾಠವಾದಂತೆ ತೋರುತ್ತದೆ.

ಈ 'ದಾರಿ ಹಿಡಿಯುವುದೆ ' ಒಂದು ವಿಶೇಷವಾದರೆ ಏನಾದರೂ ಬೇರೆಯೇ ಮಾಡಹೋಗಿ ಎಡವಟ್ಟು ಮಾಡುವುದು ಇನ್ನೊಂದು ವಿಶೇಷ ಉದಾ : ಮಾಂಸಾಹಾರಕ್ಕೆ ದೀಕ್ಷಾ ನಂತರವೂ ಅವಕಾಶ ಕೊಡುವುದು ; ನಕ್ಸಲೀಯರನ್ನು ಬೆಂಬಲಿಸುವುದು ಇತ್ಯಾದಿ ಹಲವಾರು ಇಂಥ ವಿಶೇಷಗಳಲ್ಲಿ 9ನೆಯ ಶತಮಾನೋತ್ಸವವೂ ಒಂದು. ನಾವು ಬೇರೆ 8ನೆಯ ಲಿಂಗೈಕ್ಯ ಶತಮಾನೋತ್ಸವ ನಿಮಿತ್ತ ದೆಹಲಿಯಲ್ಲಿ 1996ರಲ್ಲಿ ಸಮ್ಮೇಳನ ಮಾಡಿ, ಕೀರ್ತಿ ಪಡೆದುದು ಶ್ರೀಗಳ ಕಣ್ಣಿನಲ್ಲಿ ಒತ್ತುತ್ತಿರಬಹುದು.

ಒಮ್ಮೆ ಒಂದು ವಾದ್ಯಗೋಷ್ಠಿ ನಡೆಯುತ್ತಿತ್ತು. ಜನರು ಸಂಗೀತದ ಮಾಧುರ್ಯವನ್ನು ಅನುಭವಿಸುತ್ತಿದ್ದರು. ಆಗ ಒಬ್ಬ ವಾದ್ಯಗಾರ ಅಪಸ್ವರ ನುಡಿಸಿ ರಸ ಭಂಗ ಮಾಡಿದ. ನಿರ್ದೇಶಕರಿಗೆ, ನಿರ್ವಾಹಕರಿಗೆ, ಉಳಿದ ವಾದ್ಯಗಾರರಿಗೆ ಕೋಪ ಬಂದಿತು, ಎಲ್ಲರೂ ಆತನ ಮೇಲೆ ಹರಿ ಹಾಯ್ದರು. ನಂತರ ಒಬ್ಬರು ಕೇಳಿದರು. ''ಏಕೆ ಹಾಗೆ ಮಾಡಿದೆ. ನಿನಗೆ ಸಂಗೀತ ಜ್ಞಾನವಿಲ್ಲವೆ ?''. ''ನನಗೆ ಗೊತ್ತಿತ್ತು, ಹತ್ತಾರು ವಾದ್ಯಗಾರರ ಜೊತೆಗೇ ನುಡಿಸಿದರೆ ನನ್ನ ಬಗ್ಗೆ ಯಾರ ಗಮನವೂ ಹರಿಯದು, ಅಪಸ್ವರ ನುಡಿಸಿದ್ದರಿಂದ ಎಲ್ಲರೂ ನನ್ನನ್ನು ಗಮನಿಸಲು ಸಾಧ್ಯವಾಯಿತು'' ಎಂದನಂತೆ.

ಶ್ರೀ ಅರವಿಂದ ಜತ್ತಿಯವರಿಗೆ ಹೇಳಿದೆ, '' ಚಿತ್ರದುರ್ಗ ಶ್ರೀಗಳು 9ನೆಯ ಶತಮಾನೋತ್ಸವ ಆಚರಿಸಲು ಬಸವ ಸಮಿತಿಯೇ ಕಾರಣ.'' ಎಂದೆ. ಅವರಿಗೆ ಆಶ್ಚರ್ಯವಾಯಿತು. ಹೇಗೆ ಎಂದರು ? ಅಷ್ಟ ಶತಮಾನೋತ್ಸವವನ್ನು ಮೈಸೂರು ಸರ್ಕಾರದವರು ಬಸವ ಸಮಿತಿಯವರ ಸಹಾಕಾರದೊಡನೆಯೇ ಮಾಡಿದರು. ಅಂದಿನ ಪುಸ್ತಕಗಳಲ್ಲಿ ಕ್ರಿ .ಶ.1106 ರಿಂದ 1168 ಎಂದು ಧರ್ಮಪಿತ ಬಸವಣ್ಣನವರ ಜೀವಿತದ ಕಾಲದ ಬಗ್ಗೆ ಬರೆಯಲಾಗಿದೆ. '' ಅದಕ್ಕೆ 2006ಕ್ಕೆ 9ನೆಯ ಜನ್ಮ ಶತಮಾನೋತ್ಸವಕ್ಕೆ ಶ್ರೀಗಳು ಕೈ ಹಾಕಿದ್ದಾರೆ ಅಂತ ಕಾಣುತ್ತೆ . ''ಎಂದೆ.

''ನಿಜ, ಆದರೆ ಆ ಲೆಕ್ಕಾಚಾರ ಸರಿಯಲ್ಲ. ಎಂದು ನಿರ್ಧಾರವಾಗಿದೆ'' ಎಂದರು ಶ್ರೀ ಅರವಿಂದ ಜತ್ತಿ''

''ಬಸವಣ್ಣನವರ ಜೀವಿತದ ಕಾಲ ನಿರ್ಣಯ ಎಂಬ ಪುಸ್ತಕವನ್ನು ನಾನು ಬರೆದಿದ್ದೇನೆ. ಕಾಲಜ್ಞಾನ ವಚನಗಳ ಅಧಿಕೃತ ಮಾಹಿತಿಯ ಮೇರೆಗೆ ಧರ್ಮಪಿತರು ಗಡಿಪಾರಾಗಿ ಕಲ್ಯಾಣವನ್ನು ತೊರೆದುದು ರಾಕ್ಷಸನಾಮ(1196) ಸಂವತ್ಸರದ ಫಾಲ್ಗುಣ ದ್ವಾದಶಿಯಂದು ಕಲ್ಯಾಣವನ್ನು ಪ್ರವೇಶಿಸಿದ್ದು ವಿಕ್ರಮ ನಾಮ ಸಂವತ್ಸರದಲ್ಲಿ, ಇದು 1160. ಧರ್ಮಪಿತರು ತಮ್ಮ ವಚನದಲ್ಲಿ ಅಯ್ಯಾ ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ. ''ಎಂಬ ಮಾತು ಸಹ ಪುಷ್ಟೀಕರಿಸುತ್ತದೆ. ಆಂಧ್ರದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರು 1196ರ ವರೆಗೆ ಇದ್ದರು ಎಂಬುದು ನಮಗೆ ಮಹತ್ವದ ದಾಖಲೆ .

ಅವರು ಧರ್ಮಗುರು ಬಸವಣ್ಣನವರು ಲಿಂಗೈಕ್ಯರಾದ ಮೇಲೆ ಶೋಕ (ಚರಮ) ಗೀತೆ ರಚಿಸಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಬಿಜ್ಜಳನು ಸಹ 1196ರ ವರೆಗೆ ಬದುಕಿದ್ದ ಬಗೆಗೆ ಸಾಕ್ಷ್ಯಾಧಾರಗಳಿವೆ.'' ಎಂದೆ, ಆಗ ಶ್ರೀ ಅರವಿಂದ ಜತ್ತಿಯವರು.

''ಒಮ್ಮೆ ಬಸವ ಸಮಿತಿಯಲ್ಲಿ ನಿಮ್ಮ ಪುಸ್ತಕದ ಬಗ್ಗೆ ಚಿಂತನೆ-ಚರ್ಚೆ ನಡೆಯಿತು. ನಿಮ್ಮ ಲೆಕ್ಕಾಚಾರ ಸೂಕ್ತವಿದೆ ಎಂದು ಬಹುಪಾಲು ಜನ ಅಭಿಪ್ರಾಯ ಪಟ್ಟರು.'' ಎಂದು ಹೇಳಿದರು ಚಿತ್ರದುರ್ಗ ಶ್ರೀಗಳಿಗೆ ಅವಸರ ಜಾಸ್ತಿ; ತಾವೇ ಮೊದಲಿಗರು ಎಂದು ಏನೇನೋ ಹೇಳ ಹೋಗಿ, ಮಾಡಲು ಹೋಗಿ ಪೇಚಿಗೆ ಸಿಕ್ಕಿಕೊಳ್ಳುವುದೇ ಜಾಸ್ತಿ. ದೆಹಲಿಯಲ್ಲಿ ಸಮ್ಮೇಳನ ಮಾಡಲಿ; ಜಗತ್ತಿನ ತುಂಬಾ ಮಾಡಲಿ; ಆದರೆ 9ನೆಯ ಶತಮಾನೋತ್ಸವ ಎಂದು ಮಾಡಹೋಗಿ ಅದನ್ನು (ಮಾಂಸಾಹಾರ ನಿರ್ಬಂಧ ಸಡಿಲಿಸ ಹೋಗಿ ಪೆಚ್ಚಾಗಿ ಕೂತಂತೆ) ಅಪಹಾಸ್ಯದ ವಸ್ತುವನ್ನಾಗಿ ಚರ್ಚೆಗೆ, ವಿವಾದಕ್ಕೆ ಗುರಿ ಮಾಡುವುದು ಬೇಡ.

-ಮಾತಾಜಿ

ಶರಣ ಮೇಳ ಹಾಗೂ ಕಲ್ಯಾಣ ಪರ್ವಕ್ಕೆ ಕರೆ

ಶರಣ ಮೇಳಕ್ಕೆ ಹೋಗ್ತೀವ್ರಿ ನಾವ್ ॥ಪ॥
ಕಲ್ಯಾಣ ಪರ್ವಕ್ಕೆ ಹೋಗ್ತೀವ್ರಿ ನಾವ್
ಬರೋರೆಲ್ಲ ಬರಬೇಕ್ರಿ ಅಣ್ಣಾ
ಹೇಳಲಿಲ್ಲ ಕೇಳಲಿಲ್ಲ ಅನ್ನೋಕಬೇಡ್ರಿ ಅಕ್ಕ
ಇಂತ ಸಮಯ ಕಳ್ಕೋಬೇಡರಿ ಅಪ್ಪ
ಬಸವ ಭೂಮಿಯ ಸ್ಪರ್ಶ ಮಾಡಬೇಕರಿ ಅಪ್ಪ ॥1॥
ಬಸವಾತ್ಮಜೆಯ ಕರೆಗೆ ಓ ಗೊಡಬೇಕರಿ ಬಂಧು

ದುಡ್ಡು ,ಕಾಸು ಕೊಟ್ಟು ನಾವು ಗಾಡಿ ಹತ್ತುತೀವ್ರಿ
ಉಚಿತವಾಗಿ ಕರೆದರೂ ನಾವು ಬೇರೆ ಕಡೆ ಹೋಗದಿಲ್ಲರಿ
ದೊಡ್ಡತನ, ಸುಳ್ಳುತನ ನಮ್ಮಲ್ಲಿಲ್ಲರಿ
ಬಿಸಿಲು, ಗಾಳಿ, ಮಳೆಗ್ನಾವು ಹೆದರೋದಿಲ್ಲರಿ ॥2॥
ಬಸವ ಗುರುವಿನ ಶ್ರೀರಕ್ಷೆ ಹೊದ್ದು ಕೊಂಡೀವ್ರಿ

ಹೊನ್ನು, ಹೆಣ್ಣು, ಮಣ್ಣಿಗಾಗಿ ನಾವು ಹೋಗೋದಿಲ್ಲರಿ
ತನು, ಮನ, ಧನಗಳ ಗುರುವಿಗೆ ಮೀಸಲಿಟ್ಟೀವ್ರಿ
ಬಸವ ಗುರು ಮಂತ್ರ ಪಠಣ ಮಾಡುತ್ತೇವ್ರಿ
ದಾರಿ ಸವೆದದ್ದೆ ನಮಗೆ ತಿಳಿಯೋದಿಲ್ಲರಿ ॥3॥
ತವರಿಗೆ ಹೋಗುವ ಹುಮ್ಮಸ್ಸು ನಮಗಿದೇರಿ

ಎಂಬತ್ನಾಲ್ಕು ಲಕ್ಷ ಜೀವ ರಾಶಿ ದಾಟ ಬಂದಿವ್ರಿ
ಮಾನವ ಜನ್ಮವೆತ್ತಿ ಈಗೊಂದು ಕಾರ್ಯ ಮಾಡಬೇಕರಿ
ಜೀವನವೆಂಬ ಭೂಮಿಯನ್ನು ಉತ್ತಬೇಕರಿ
ಉತ್ತಿ, ಬಸವ ತತ್ವದ ಬೀಜ ಬಿತ್ತ ಬೇಕರಿ ॥4॥
ಬಿತ್ತಿ ಬೆಳೆದರೆ ಮತ್ತೆ ಭೂಮಿಯಲ್ಲಿ ಹುಟ್ಟೋದಿಲ್ಲರಿ

ಬಸವಾತ್ಮಜೆ ಎಂಬ ಬಸವ ಗಾಳಿ ಬೀಸುತ್ತಿದೇರಿ
ನಮ್ಮ ಬಾಳಿನ ಲೋಪ ದೋಷವೆಂಬ ಜೊಳ್ಳನ್ನ ತೂರಬೇಕರಿ
ಶರಣ ಮೇಳ, ಕಲ್ಯಾಣ ಪರ್ವವೆಂಬ ಕಣ ಮಾಡಿ ಬಿಟ್ಟಾರ್ರಿ
ಶ್ರದ್ಧೆ, ಭಕ್ತಿ, ನಿಷ್ಠೆ ಎಂಬ ಕಾಳು ನಾವಾಗಬೇಕರಿ ॥5॥
ಬಸವ ಕಂದಳ ಪ್ರಿಯ ಸರ್ವೇಶ ಪ್ರಭುವು ತನಗೇ ಬೇಕೆಂದು ಎತ್ತಿಕೊಳ್ತಾನ್ರಿ

''ಬಸವ ಕಂದ''. ಸರೋಜಮ್ಮ ನಾಗರಾಜು

Digitalized by e-Sahithya Documentation Forum
Sponsored by Sarayu Foundation Trust

ಧರ್ಮ ಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ
ಮಹಾಮನೆಯ ಮಕ್ಕಳು. ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು
ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು-ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು
ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು
ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು. ಇತ್ತೀಚೆಗೆ ಬಂದಿರಬಹುದು, ಇದೇ
ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು.
ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ
ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ
ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ
ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ
ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯೊಡನೆ
ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ
ತಂದೆ-ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ
ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ
ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಮತ್ತು ಶರಣ ಭೂಮಿ ಬಸವ
ಕಲ್ಯಾಣದಲ್ಲಿ ನಡೆಯುವ ಕಲ್ಯಾಣ ಪರ್ವ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ-ಸೋದರತ್ವ-ಸ್ವಾತಂತ್ರ
ಇವು ನನ್ನ ತತ್ತ್ವದ ಮುಖ್ಯ ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನೂ ಕಾಣಬಹುದು. ಅದಕ್ಕಾಗಿ
ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ
ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ
ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ.
ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ
ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ
ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ
ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ-ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು
ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು
ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ
ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು

ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ
ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ
ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು
ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ
ವರ್ಣವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟುಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ
ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು
ಒಳಗೊಂಡು ಬಹಳ ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು; ಇವುಗಳಿಂದ
ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ
ಹೊರಟು, ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ
ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ
ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು
ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ,
ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು
ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು
ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು, ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ.
ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು
ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ
ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ
ಸಮ್ಮತವಾಗದ ವಿಷಯ. ನನ್ನ ತತ್ತ್ವ ಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ
'ಗಣಧರ್ಮ'ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ
ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ, ಕರೆಯದೆ ತನ್ನ ಬಳಗವೆಲ್ಲವ?,
ಕೋಳಿ ಒಂದು ಕುಟುಕ ಕಂಡಡೆ, ಕೂಗಿ ಕರೆಯದೆ ತನ್ನ ಕುಲವನೆಲ್ಲವ ?,
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ, ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

Digitalized by e-Sahithya Documentation Forum
Sponsored by Sarayu Foundation Trust

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ನೆನಹು : ಪ್ರತಿದಿನ ಸಂಜೆ 7 ಘಂಟೆಗೆ ಸರಿಯಾಗಿ ನೀವು ಎಲ್ಲಿಯೇ ಇದ್ದರೂ ಆ ಸ್ಥಳದಲ್ಲಿ ಐದು ನಿಮಿಷಗಳ ಪ್ರಾರ್ಥನೆಯನ್ನು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಅಳವಡಿಸಿಕೊಂಡು ತಪ್ಪದೆ ಮಾಡಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು, ನೆನಹು -ಸಂಜೆಯ ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ -ಶರಣ ಸಂಗಮ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೆ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದು ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. 'ಗಣ ಮೇಳ 'ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ <u>ಶರಣ ಮೇಳ</u>. ಆದ್ದರಿಂದ ನಿಮ್ಮ ಎಲ್ಲ ಕೆಲಸ

ಕಾರ್ಯಗಳನ್ನು ಬದಿಗೊತ್ತಿ ಕೂಡಲಸಂಗಮಕ್ಕೆ ಧಾವಿಸಿ ಬಂದು ಜನವರಿ 11 ರಿಂದ 15 ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಕಲ್ಯಾಣ ಪರ್ವ: 36 ವರ್ಷಗಳ ಕಾಲ ನನ್ನ ಕಾರ್ಯಕ್ಷೇತ್ರವಾಗಿದ್ದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಪ್ರದೇಶಗಳಿಂದೆಲ್ಲ ಶರಣರನ್ನು ಆಕರ್ಷಿಸಿದ ಬಸವ ಕಲ್ಯಾಣದಲ್ಲಿ ಪ್ರತಿವರ್ಷದ ಮೇ 1,2 ಮತ್ತು 3ರಂದು ನಡೆಯುವ ಕಲ್ಯಾಣ ಪರ್ವದಲ್ಲಿ ಭಾಗಿಗಳಾಗಿ ಶರಣ ವಂದನೆಯನ್ನು ಮಾಡಿ, ಧನ್ಯರಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ-ಮಡಿವಾಳ ಮಾಚಯ್ಯ-ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ-ಮಧುವಯ್ಯ-ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ, ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಮತ್ತು ಕಲ್ಯಾಣ ಪರ್ವಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಆದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳ ಮತ್ತು ಕಲ್ಯಾಣ ಪರ್ವಗಳಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಿರುತ್ತಾಳೆ. ಬನ್ನಿ, ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ಲಿಂಗದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ ಬಸವಣ್ಣ
(ಗ್ರಹಿಸಿದವರು-ಬಸವಾತ್ಮಜೆ ಮಾತಾಜಿ)

Digitalized by e-Sahithya Documentation Forum
Sponsored by Sarayu Foundation Trust

ವಚನ ಚಿಂತನ

-ಮಾತಾಜಿ

ಗುರುವಾಗಿ ಬಂದೆನಗೆ ದೀಕ್ಷೆಯ ಮಾಡಿದಿರಿ ಬಸವಣ್ಣ
ಲಿಂಗವಾಗಿ ಬಂದೆನ್ನ ಮನದ ಮಲಿನವ ಕಳೆದಿರಿ ಬಸವಣ್ಣ
ಜಂಗಮವಾಗಿ ಬಂದೆನ್ನ ಪ್ರಪಂಚು ಕತನವ ಕಳೆದು,
ಪರಮ ಸೀಮೆಯ ತೋರಿದಿರಿ ಬಸವಣ್ಣ
ಇಂತಿವೆಲ್ಲವೂ ಬಸವಣ್ಣನಾಗಿ ಎನಗೆ ಪ್ರಸಾದವ ನೀಡಿ ಸಲಹಿದ
ಕಪಿಲಸಿದ್ಧಮಲ್ಲಿಕಾರ್ಜುನಾ, ಇನ್ನೆನಗತಿಶಯವೇನೂ ಇಲ್ಲ.

-ಶ್ರೀ ಸಿದ್ಧರಾಮೇಶ್ವರ ವಚನ 414

ವಚನಗಳನ್ನು ನಿರಂತರವಾಗಿ ಕೇಳುತ್ತ (ಕೆಸೆಟ್ಟು ಮೂಲಕ) ಓದುತ್ತಾ ಇದ್ದರೆ ಅವುಗಳ ಒಳ ಅರ್ಥಗಳ ಪದರಗಳು ಬಿಚ್ಚುತ್ತ ಹೋಗುತ್ತವೆ. ಷಡ್‌ಗಣಾಧೀಶರ ವಚನಗಳಂತೂ ಅದ್ಭುತ ತತ್ತ್ವಸಂಹಿತೆಗಳು. ಕಾರಿನಲ್ಲಿ ಪಯಣಿಸುವಾಗ ಶರಣ ಮೇಳದಲ್ಲಿ ನಾವು ಬಿಡುಗಡೆ ಮಾಡಿದ ಸಿದ್ಧರಾಮೇಶ್ವರ ಸಂದೇಶ ಕೇಳುತ್ತಲಿದ್ದೆ. ಈ ವಚನದ ಸಾಲು ನನ್ನ ಗಮನ ಸೆಳೆದವು.

ಐತಿಹಾಸಿಕವಾಗಿ ಹೇಳಬೇಕೆಂದರೆ ಶ್ರೀ ಸಿದ್ಧರಾಮೇಶ್ವರರಿಗೆ ಗುರುವಾಗಿ ದೀಕ್ಷೆ ಕೊಟ್ಟವರು ಚನ್ನ ಬಸವಣ್ಣನವರು; ಕೊಟ್ಟದ್ದು ಇಷ್ಟಲಿಂಗವನ್ನು; ಜಂಗಮವಾಗಿ ಬಂದು ಕೆರೆ ಭಾವಿ ದೇವಾಲಯ ಕಟ್ಟಿಸುತ್ತ ವ್ಯವಹಾರ ಮುಖಿಯಾಗಿದ್ದ ಸಿದ್ಧರಾಮೇಶ್ವರರನ್ನು ಆಧ್ಯಾತ್ಮ ಮುಖಿಯನ್ನಾಗಿ ಮಾಡಿದುದು ಅಲ್ಲಮಪ್ರಭುದೇವರು. ಈ ಬಗ್ಗೆ ಯಾವ ಸಂಶಯವೂ ಇಲ್ಲ. ಆದರೆ ಶ್ರೀ ಸಿದ್ಧರಾಮೇಶ್ವರರು ಹೀಗೇಕೆ ಎಲ್ಲರನ್ನೂ ಧರ್ಮಗುರು ಬಸವಣ್ಣನವರಿಗೆ(ಆರೋಪಿಸು) ಅರ್ಪಿಸುತ್ತಿರುವರು ಎಂಬುದು ಸೋಜಿಗಕಾರಕವಲ್ಲವೆ?

ಇದರಲ್ಲಿ ಮಹತ್ತರವಾದ ಒಂದು ತತ್ತ್ವ ಸಿದ್ಧಾಂತವನ್ನು ಶ್ರೀಸಿದ್ಧರಾಮೇಶ್ವರರು ಪ್ರತಿಪಾದಿಸುತ್ತಿದ್ದಾರೆ. ಲಿಂಗಾಯತ ಧರ್ಮದ ಗಂಗಾಳ(ಆರೋಗಣೆ ಮಾಡುವ ತಟ್ಟೆ) ನಿಂತಿರುವುದೇ ಗುರು-ಲಿಂಗ-ಜಂಗಮ ಎಂಬ ತ್ರಿವಿಧ ಪೂಜ್ಯ ವಸ್ತುಗಳ ಮೂರು ಕಾಲಿನ ಅಡ್ಡಣಿಗೆಯ ಮೇಲೆ. ಇವೆಲ್ಲವನ್ನು ಕೊಟ್ಟವರು ಧರ್ಮಪಿತ ಬಸವಣ್ಣನವರು. ಲಿಂ ॥ಪೂಜ್ಯ ಅಪ್ಪಾಜಿಯವರಿದ್ದಾಗ 1972 ರ ನಂತರ ನಾವು ಗಂಭೀರವಾಗಿ ಚಿಂತಿಸುತ್ತಿದ್ದೆವು. "ಗುರು ಎಂಬ ಅಷ್ಟಾವರಣದ ಮೊದಲ ತತ್ತ್ವದಲ್ಲಿ ಧರ್ಮಗುರು ಬಸವಣ್ಣನವರನ್ನು ಪ್ರತಿಷ್ಠಾಪಿಸಬೇಕು. ದೀಕ್ಷೆ ನೀಡುವ ದೀಕ್ಷಾ ಗುರುವಾಗಲಿ, ಜ್ಞಾನ ಕೊಡುವ ಶಿಕ್ಷಾ ಗುರುವಾಗಲಿ ಜಂಗಮದ ಅಂಕಣದಲ್ಲಿ ಇರಬೇಕು. ಬಹುದೇವತೋಪಾಸನೆ ಹಿಂದು ಸಮಾಜದ ಒಡಕಿಗೆ ಕಾರಣವಾದಂತೆ, ಬಹುಗುರೂಪಾಸನೆ ಲಿಂಗಾಯತ ಸಮಾಜದ ಒಡಕಿಗೆ ಮುಖ್ಯ ಕಾರಣವಾಗಿದೆ. ಲಿಂಗಾಯತರನ್ನು ನಿಮ್ಮ ಗುರು ಯಾರು? ಎಂದರೆ ತಮ್ಮ ಕುಲಗುರು, ಜಾತಿಗುರು, ದೀಕ್ಷಾಗುರು ಇತ್ಯಾದಿ ಹೆಸರು ಹೇಳುತ್ತಾರೆ. ಈ ಪದ್ಧತಿ ಹೋಗಿ ಕೇವಲ ಧರ್ಮಗುರುವಿನ ಹೆಸರು ಮಾತ್ರ ಹೇಳುವಂತಾಗಬೇಕಾದರೆ ಅಷ್ಟಾವರಣದಲ್ಲಿ ಬರುವ ಗುರು-ಧರ್ಮಗುರುವೇ ಇರಬೇಕು"

ನಮ್ಮ ಈ ಆಲೋಚನಾ ಸರಣಿಗೆ ಪೂರ್ಣಪೋಷಕವಾಗಿದೆ ಶ್ರೀ ಸಿದ್ಧರಾಮೇಶ್ವರರ ವಚನ. ಇಂದು ಚನ್ನಬಸವಣ್ಣನವರು ಅವರಿಗೆ ಇಷ್ಟಲಿಂಗ ದೀಕ್ಷೆ ನೀಡಿರಬಹುದು. ಆದರೆ ದೀಕ್ಷೆ ಪಡೆಯುವ ಸೌಲಭ್ಯ ಎಲ್ಲರಿಗೂ ವಿಸ್ತರಿಸಿ, ಚನ್ನಬಸವಣ್ಣನವರು ಕೊಡಲಿಕ್ಕೆ ಶ್ರೀ ಸಿದ್ಧರಾಮರು ಅರ್ಥಾತ್ ಶೂದ್ರರು ಸಹ ಪಡೆಯಲಿಕ್ಕೆ ಕಾರಣ. ಪುರುಷ ಯಾರು? ಬಸವಣ್ಣ ಎಂದು ಉತ್ತರಿಸುತ್ತಾರೆ ಸಿದ್ಧರಾಮರು. ಪುನಃ ಅವರ ಇನ್ನೊಂದು ವಚನ ನಮ್ಮ ನೆನಪಿನ ಬುತ್ತಿ ಬಿಚ್ಚುತ್ತದೆ:

ಸ್ವಾಮಿ, ಸ್ವಾಮಿ, ಭವಿಯ ಭಕ್ತನ ಮಾಳ್ಪುದು
ಯೋಗ್ಯವೋ ಅಯೋಗ್ಯವೋ?
ಆಗಮ ವಿಚಾರದಿಂದ ಆಗದಿಹುದೆಂಬ ಸಿದ್ಧಾಂತ
ಇಲ್ಲಿಯೋ, ಇಲ್ಲಿಯೋ ಪರಮಗುರು ಸಂಗನ ಬಸವಣ್ಣನು
ಸರ್ವಜಾತಿಯ ಲಿಂಗದ ರಾಶಿಯ ಮಾಡಿದ ಸಿದ್ಧಾಂತ।

ಗಡಿಯಾರಗಳು ಇಂದು ಹೆಚ್.ಎಂ.ಟಿ, ಟೈವಾಕ್, ಟೈಟನ್ ಇತ್ಯಾದಿ ನೂರಾರು ಕಂಪನಿಗಳಿಂದ ತಯಾರಾಗುತ್ತಿರಬಹುದು; ಮೂಲ ಪರಿಕಲ್ಪನೆ ಕೊಟ್ಟಾತ ಅದರ ಸಂಸ್ಥಾಪಕನಲ್ಲವೆ? ಅದೇ ರೀತಿ ಚನ್ನಬಸವಣ್ಣ ಶ್ರೀ ಸಿದ್ಧರಾಮರಿಗೆ ಇಷ್ಟಲಿಂಗವನ್ನು ಕೊಟ್ಟಿರಬಹುದು; ಸಾಮಾನ್ಯ ಅಯ್ಯನೋರು ಇಂದು ಕೊಡಬಹುದು. ಆದರೆ ಇಷ್ಟಲಿಂಗದ ಪರಿಕಲ್ಪನೆ ಕೊಟ್ಟವರು ಧರ್ಮಪಿತರು. ಮತ್ತು ಪ್ರತಿಯೊಬ್ಬ ಮಾನವನಿಗೆ ವರ್ಣ, ಜಾತಿ, ಕುಲ, ಆಶ್ರಮ, ಲಿಂಗಭೇದವನ್ನರಸದೆ ಇಷ್ಟಲಿಂಗವನ್ನು ಕೊಡುವ ವ್ಯವಸ್ಥೆ ಸಹ ಮಾಡಿದರು. ಅದಕ್ಕಾಗಿಯೇ ಗುರುವಾಗಿ ಬಂದು ದೀಕ್ಷೆ ಮಾಡಿದಿರಿ, ಲಿಂಗವಾಗಿ ಬಂದೆನ್ನ ಮನದ ಮೈಲಿಗೆಯ ಕಳೆದಿರಿ ಎಂದು ಸಿದ್ಧರಾಮೇಶ್ವರರು ಬಸವಣ್ಣನವರನ್ನು ಹೊಗಳಿದ್ದಾರೆ.

ಜಂಗಮ ತತ್ತ್ವವಂತೂ ಬಸವಣ್ಣನವರ ಅಮೋಘ ಪರಿಕಲ್ಪನೆ; ಬಸವಣ್ಣನವರ ಜಂಗಮ ಭಂಗಿ ಸೇವಿಸುವವನಲ್ಲ, ಅನಾಚಾರಿಯಲ್ಲ. ಲೋಕಸಂಗ್ರಹಿ, ಸಾಮಾಜಿಕ-ಧಾರ್ಮಿಕ ಹೊಣೆಗಾರಿಕೆಯುಳ್ಳ ವಿಶ್ವ ಕುಟುಂಬಿ ; ತನು-ಮನ-ಧನಗಳೆಲ್ಲವನ್ನು ಸಮಷ್ಟಿಯ ಉದ್ಧಾರಕ್ಕೆ ಅರ್ಪಿಸಿದವನು; ಕೇವಲ ನಿರ್ವಿಕಲ್ಪ ಸಮಾಧಿಯಲ್ಲಿ ಮೈಮರೆತು ಜಗದ ಹಿತವನ್ನು ಕಡೆಗಣಿಸುವವನಲ್ಲ; ಚೈತನ್ಯ ಸಮಾಧಿ ಹೊಂದಿ ಜನ ಹಿತ ಕಾರ್ಯ ಮಾಡುತ್ತಲೇ ಆನಂದ ಮೂರ್ತಿಯಾಗಿ ಇರುವವನು. ಬಸವಣ್ಣನವರು ಕೊಟ್ಟ ಇಂಥ ಆದರ್ಶ ಜಂಗಮದ ಪರಿಕಲ್ಪನೆಯು ವಿರಕ್ತಮೂರ್ತಿ ಅಲ್ಲಮಪ್ರಭುವಿನ ರೂಪದಲ್ಲಿ ಸಾಕಾರಗೊಂಡಿತ್ತು. ಹೀಗಾಗಿ ಅಲ್ಲಮಪ್ರಭು ಸಿದ್ಧರಾಮೇಶ್ವರರನ್ನು ಕರೆತಂದಿದ್ದರೂ ಇದರ ಹಿಂದಿನ ಸೂತ್ರಧಾರಿ ಬಸವಣ್ಣನವರ ವಿಚಾರಧಾರೆ ಎಂಬುದನ್ನು ಸಿದ್ಧರಾಮೇಶ್ವರರು ಗ್ರಹಿಸಿದ್ದಾರೆ.

ಗುರು-ಲಿಂಗ-ಜಂಗಮ ತತ್ತ್ವದ ರೂವಾರಿ ಬಸವಣ್ಣನವರೇ ಆದ ಕಾರಣ ಶ್ರೀಸಿದ್ಧರಾಮೇಶ್ವರರಿಗೆ ಗುರು ಕಾರುಣ್ಯ-ಲಿಂಗಧಾರಣೆ/ ಲಿಂಗಯೋಗ/ ಜಂಗಮ ಗೋಷ್ಠಿ ಎಲ್ಲವೂ ಪ್ರಸಾದವಾಗಿ ಸಿಕ್ಕಿವೆ. ಹೀಗಾಗಿ ಅವರಿಗೆ ತಾವು ಹುಡುಕಬೇಕಾದ್ದು ಹುಡುಕಿ ಪಡೆಯಬೇಕಾದ್ದು ಏನೂ ಇಲ್ಲ ಎಂಬ ಸಂತೃಪ್ತಿ ತುಂಬಿ ತುಳುಕುತ್ತಿದೆ. ಇದನ್ನು ಅರ್ಥ ಮಾಡಿಕೊಂಡಾಗ ಈ ಎಲ್ಲ ಸಂಪತ್ತನ್ನು, ಶರಣ ಪರಂಪರೆಯ ವಾರಸುದಾರಿಕೆ ಪಡೆದ ನಾವು ಎಂಥ ಧನ್ಯರು ಎಂಬ ಸಂತೃಪ್ತಿ ನಮಗೂ ಉಂಟಾಗುತ್ತಿದೆ. ★

★ ಪೂಜ್ಯ ಮಾತೆಗೆ ನುಡಿ ನಮನ ★

ಶಿಖರದಲ್ಲಿ ಎವರೆಸ್ಟ್ ಶಿಖರಕ್ಕಿಂತ ಎತ್ತರವಿರುವ ಜ್ಞಾನದ ಕಳೆ
ನೊಸಲಿನಲ್ಲಿ ಅಪ್ಪಾಜಿಯವರ ಶಿಷ್ಯತ್ವ ಸಾರುವ ವಿಭೂತಿ ಕಳೆ
ಕಣ್ಣಿನಲ್ಲಿ ತನಗೆ ತಾನೆ ಸಾಟಿ ಎನಿಸುವ ದಿವ್ಯ ಪರುಷ ದೃಷ್ಟಿಯ ಕಳೆ
ಮಾತನಾಡಿದರೆ, ಅನರ್ಘ್ಯ ಮುತ್ತು ರತ್ನಗಳ ಸುರಿಮಳೆಯ ಕಳೆ
ಹೃದಯ ಮಂದಿರದಲ್ಲಿ ಕಳಸವೆಂಬಂತೆ ಲಿಂಗದೇವನ ದಿವ್ಯ ರೂಪದ ಕಳೆ
ಉದರದಲ್ಲಿ ಮನುಕುಲವನ್ನೇ ತನ್ನದೆನ್ನುವ ತಾಯ್ತನದ ತಂಪು ಕಳೆ
ಬಲದ ಕೈಯಲ್ಲಿ ಲೇಖನಿ ನರ್ತನದಿಂದಾದ ವಿಶ್ವ ಮಾನ್ಯವಾದ ಕೃತಿಗಳ ಕಳೆ
ಎಡದ ಕೈಯಲ್ಲಿ ಸೃಷ್ಟಿ ಕರ್ತ ಲಿಂಗದೇವನ ಅಪೂರ್ವ ಪೀಠದ ಕಳೆ
ಪರುಷ ಪಾದ ಕಮಲಗಳ ಸ್ಪರ್ಶದಿಂದ ಬಂದ ಕೋಟಿ ಕೋಟಿ ಶರಣರ ಕಳೆ
ಆ ಕೋಟ್ಯಾನು ಕೋಟಿ ದುಂಬಿಗಳಲ್ಲಿ ನಾನು ಒಬ್ಬಳು ಎಂದು
ನನಗೆ ದಿವ್ಯ ತೃಪ್ತಿಯ ಕಳೆ.

- ಜಯಶ್ರೀ ಬಸವರಾಜ ಶಿವಪುರ, ಹಾವೇರಿ

Digitalized by e-Sahithya Documentation Forum
Sponsored by Sarayu Foundation Trust

ಸಮಸ್ಯೆ ? - ಸಮಾಧಾನ.....!

?. ಕರುಣಾಕರ ಪಾಟೀಲ್,ಹುಬ್ಬಳ್ಳಿ ದೊಡ್ಡ ವ್ಯಕ್ತಿಗಳಾದರೆ
ಸಾಮಾನ್ಯವಾಗಿ ಅನೇಕ ಜನಾಂಗದವರಿಗೆ ತಮ್ಮ ಕುಲದಲ್ಲಿ ಹುಟ್ಟಿ ರಾಮ, ಕೃಷ್ಣರನ್ನು
ಬಹಳ ಹೆಮ್ಮೆ ಎನಿಸುತ್ತದೆ. ಬ್ರಾಹ್ಮಣ ಮೂಲದವರಲ್ಲದಿದ್ದರೂ ಹುಟ್ಟಿದರೂ
ಪೂಜಿಸುವ ಬ್ರಾಹ್ಮಣರು ಬಸವಣ್ಣನವರು ತಮ್ಮ ಕುಲದಲ್ಲೇ ಬಹುದಿವಸಗಳಿಂದ
ಅಷ್ಟೊಂದು ಅಭಿಮಾನ ಪಡುವುದಿಲ್ಲವೇಕೆ ? ಈ ಸಂದೇಹ
ನನ್ನನ್ನು ಕಾಡುತ್ತಿದೆ.

★ ಎಲ್ಲ ಬ್ರಾಹ್ಮಣರೂ ಬಸವಣ್ಣನವರನ್ನು ಅರ್ಥಾತ್ ಅವರ ವಿಚಾರಧಾರೆಯನ್ನು ಇಷ್ಟಪಡುವುದಿಲ್ಲ ಎಂಬುದು ಸುಳ್ಳು.
ದಿ. ಅನಕೃ, ರಂಗನಾಥ ದಿವಾಕರ್, ಎಂ.ಆರ್.ಶ್ರೀ ಮುಂತಾದವರೆಲ್ಲರೂ ಬಸವಾದಿ ಪ್ರಮಥರ ಬಗ್ಗೆ ಅವರ
ವಿಚಾರಗಳ ಬಗ್ಗೆ ಬಹಳ ಅಭಿಮಾನದಿಂದಲೇ ಬರೆದಿದ್ದಾರಲ್ಲವೇ? ಮತಿವಂತರಲ್ಲದ ಮತೀಯ ದೃಷ್ಟಿಕೋನದವರು
ಯಾಕೆ ಇಷ್ಟ ಪಡುವುದಿಲ್ಲ ವೆಂಬುದಕ್ಕೆ ಕಾರಣ ಹೀಗಿದೆ: ರಾಮ, ಕೃಷ್ಣ ಮುಂತಾದವರು ವರ್ಣಾಶ್ರಮ ಧರ್ಮದ
ಪ್ರತಿಪಾದಕರು ಮತ್ತು ಪಾಲಕರು. ಅವರನ್ನು ಕುರಿತು ಜನರು ಗ್ರಂಥಗಳನ್ನು ಓದಿದಾಗ ಪುರೋಹಿತ ಶಾಹಿ, ಜ್ಯೋತಿಷ್ಯ,
ಮೂಢ ನಂಬಿಕೆ ಮತ್ತಷ್ಟು ಹುಲುಸಾಗಿ ಬೆಳೆಯಲು ಅವಕಾಶ ಲಭ್ಯವಾಗುತ್ತದೆ. ಬಸವಣ್ಣನವರ ಜೀವನ, ಹೋರಾಟ,
ಸಂದೇಶ ಓದಿದಾಗ ಜನರು ಜಾಗೃತರು, ಜ್ಞಾನಿಗಳೂ ಆಗುವರು ;ಮೂಢನಂಬಿಕೆ ಬಿಡುವರು. ಅದಕ್ಕಾಗಿಯೇ
ಮತೀಯವಾದಿ ಬ್ರಾಹ್ಮಣರಿಗೆ ಬಸವಣ್ಣನವರ ಬಗ್ಗೆ ಬಲು ಕೋಪ.

? ಶಿವ ಪ್ರಕಾಶ್ ಇಂಜಿನಿಯರ್, ಹರಿಹರ
ಒಬ್ಬ ವ್ಯಕ್ತಿ ಸಂತೋಷದ ಭರದಲ್ಲಿ ಏನಾದರೂ ಒಂದು ಮಾತು ಕೊಡುತ್ತಾನೆ.
ಸಂತೋಷದ ಆವೇಶ ಇಳಿದ ಬಳಿಕ ಅದು ತಪ್ಪು ಎಂದು ತಿಳಿಯುತ್ತದೆ. ಅಂಥಃ
ಮಾತನ್ನು ಪೂರೈಸದೆ ಇದ್ದರೆ ಮಾತಿಗೆ ತಪ್ಪಿದಂತಾಗುತ್ತದೆಯೇ. ?

★ ಮನುಷ್ಯನಿಗೆ ಅತಿ ಸಂತೋಷ, ಅತಿ ದುಃಖ, ಅತಿ ಕ್ರೋಧ ಮುಂತಾಗಿ ನಶೆ ನೆತ್ತಿಗೆ ಏರಿದಾಗ ದುಡುಕುವುದುಂಟು,
ಆ ಆವೇಶದಲ್ಲಿ ದುಡುಕಿ ಮಾತುಕೊಟ್ಟಿದ್ದು, ಪ್ರತಿಜ್ಞೆಯೇ ಅಲ್ಲ. ನಂತರ ಆವೇಶವು ಇಳಿದು ವಿವೇಕವು
ಮೂಡಿದಾಗ ಆ ವಾಗ್ದಾನ ಮೂರ್ಖತನದ್ದು, ದುಃಖಕಾರಕ ಎನ್ನಿಸಿದರೆ ಅದನ್ನು ಪಾಲಿಸದಿರುವುದೇ ವಿವೇಕಯುಕ್ತ
ದಶರಥನು ಕೈಕೇಯಿಗೆ ಕೊಟ್ಟ ಅಂಥ ವಾಗ್ದಾನವೇ ರಾಮನ ವನವಾಸದಂತಹ ದುರಂತಕ್ಕೆ ಕಾರಣವಾಯಿತು !.
ಒಂದು ಸುಂದರ(ರಾವಣ) ಸಾಮ್ರಾಜ್ಯವನ್ನೇ ನಾಶಮಾಡಿತು ಎಂಬುದನ್ನು ಕಾಣುತ್ತೇವೆ. ಗಂಡ-ಹೆಂಡತಿ ಮುನಿಸು
ಬಂದಾಗ ಸಾಯೋತನಕ ನಿನ್ನ ಜೊತೆ ಮಾತಾಡೋಲ್ಲ ಎನ್ನುತ್ತಾರೆ ಎಂದುಕೊಳ್ಳಿ. ಅದನ್ನು ಪ್ರತಿಜ್ಞೆ ಎಂದು
ಪಾಲಿಸುವುದು ಮೂರ್ಖತನದ್ದು.

?. ಚಂದ್ರಕಾಂತ ಕಲಬುರ್ಗಿ, ಹುಬ್ಬಳ್ಳಿ
ಬೆಂಗಳೂರಿನಲ್ಲಿ ನಗೆ ಕೂಟ, ನಗೆ ಹಬ್ಬಗಳು ಬಹಳ ಜನಪ್ರಿಯವಾಗುತ್ತಿವೆ ಏಕೆ ?
ಕಷ್ಟ-ಕಾರ್ಪಣ್ಯಗಳಲ್ಲಿ ನೋಯುತ್ತಿರುವ ನಮ್ಮಂಥ ಗ್ರಾಮೀಣರಿಗೆ ಅದು ವಿಲಕ್ಷಣವಾಗಿ
ತೋರುತ್ತದೆ.

★ ಬೆಂಗಳೂರು ನಗರವಾಸಿ ಜನರಿಗೆ ಬೆಳಗಿನಿಂದ ರಾತ್ರಿವರೆಗೂ ಒತ್ತಡದ ಬದುಕು, ಇನ್ನು ಬಂಧುಗಳನ್ನಂತು
ಆಹ್ವಾನಿಸಿ-ಆದರಿಸುವ ಮಾತಂತೂ ದೂರವೇ ಉಳಿಯಿತು. ಪ್ರತಿಯೊಂದು ವಸ್ತುವನ್ನೂ ದುಡ್ಡು ಕೊಟ್ಟೇ
ಕೊಳ್ಳಬೇಕು. ಅದರಂತೆ ಸಹಜ ಜೀವನದಲ್ಲಿ ಸಿಗದ ನಗೆಯನ್ನು (ದುಡ್ಡು ಕೊಟ್ಟು) ಸಮಾರಂಭಗಳಲ್ಲಿ ಪಡೆಯುವರು.
ಬಡತನ, ಬರ, ಸರ್ಕಾರಿ ವ್ಯವಸ್ಥೆಯಿಂದ ಶೋಷಣೆ ಮುಂತಾಗಿ ಗ್ರಾಮೀಣ ಜನರಾದ ನಿಮ್ಮಂತಹವರು ಪಡುವ
ನೋವಿನ ದುಃಖ ಮರೆಯಲೆಂದೇ ನಗರವಾಸಿ ಶ್ರೀಮಂತರು, ಅಧಿಕಾರಿಗಳು, ಮಂತ್ರಿಗಳು ಬುದ್ಧಿ ಜೀವಿಗಳು
ನಗೆಯಹಬ್ಬಗಳಲ್ಲಿ ಭಾಗವಹಿಸಿ ನಕ್ಕು ನಲಿಯುವುದು ಅಂತ ಕಾಣುತ್ತದೆ, ಇಷ್ಟೂ ನಿಮಗೆ ತಿಳಿಯೋಲ್ಲವೆ. ?

?. ಸುನಂದಮ್ಮ ಜಗನ್ನಾಥಪ್ಪ ಪನಸಾಲೆ, ಗುಲಬರ್ಗಾ
ಶರಣ ಹರಳಯ್ಯನವರ ಪುತ್ರ ಶೀಲವಂತ ಮತ್ತು ಶರಣ ಮಧುವರಸರ
ಪುತ್ರಿ ಲಾವಣ್ಯವತಿಯ ವಿವಾಹ ಅಂತರ್ ಜಾತೀಯ ವಿವಾಹವಲ್ಲ; ಅದು ಇಬ್ಬರು ಲಿಂಗಾಯತರ ನಡುವೆ
ನಡೆದ ವಿವಾಹವಾದ್ದರಿಂದ ಸಮಾನ ಧರ್ಮೀಯರ ಮಧ್ಯೆ ಆದ ವಿವಾಹ, ಆದ್ದರಿಂದ ಅದನ್ನು ಅಂತರ್
ಜಾತೀಯ ವಿವಾಹ ಎನ್ನುವುದು ತಪ್ಪು ಎಂದು ನನ್ನ ಅಭಿಪ್ರಾಯ ಶರಣರು ವಿಭೂತಿ,ರುದ್ರಾಕ್ಷಿ ಇಷ್ಟಲಿಂಗ
ಧರಿಸಿದವರ ಜೊತೆ ಮಾತ್ರ ವೈವಾಹಿಕ ಸಂಬಂಧ ಮಾಡಲು ಹೇಳಿದ್ದಾರೆಯಲ್ಲವೆ.?

★ ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯದ ದೃಷ್ಟಿಯಲ್ಲಿ ಇದು ಸಮಾನ ಧರ್ಮೀಯರ ಮಧ್ಯೆ ಆದ
ವಿವಾಹ, ಆದರೆ ಅಂದು ಬೇರು ಬಿಟ್ಟಿದ್ದ ವೈದಿಕ ಸಮಾಜಶಾಸ್ತ್ರದ ಪ್ರಕಾರ ಮಧುವರಸ ದ್ವಿಜ ವರ್ಣೀಯ. ಹರಳಯ್ಯ
ಅಸ್ಪೃಶ್ಯ. ನಿಚ್ಚಣಿಕೆ (Ladder type of society)ಯ ಅತ್ಯಂತ ಮೇಲಿನ ಕಾಲಿನ ಮೇಲೆ ನಿಂತವರು
ಮಧುವರಸರು ಕೆಳಗಿನ ಶ್ರೇಣಿಯಲ್ಲಿದ್ದವರು ಹರಳಯ್ಯನವರು. ಹೀಗಾಗಿ ಇದು ಪ್ರತಿಲೋಮ ವಿವಾಹ. ವೈದಿಕರ
ದೃಷ್ಟಿಯಲ್ಲಿ ಅದು ಬರೀ ಅಂತರ್ ಜಾತೀಯ ವಿವಾಹವಲ್ಲ, ವರ್ಣಾಂತರ ವಿವಾಹ, ಏಕೆಂದರೆ ಚತುರ್ವರ್ಣಗಳಾದ
ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಲ್ಲಿ ಪುನಃ ಹಲವಾರು ಜಾತಿಗಳು ಬರುತ್ತವೆ. ಉದಾ: ಕುರುಬರು, ಒಕ್ಕಲಿಗರು,
ರೆಡ್ಡಿ, ಮಡಿವಾಳರು ಇತ್ಯಾದಿಗಳನ್ನು ಉದ್ಯೋಗಗಳ ಆಧಾರದ ಮೇಲೆ ಜಾತಿಗಳೆಂದು ವರ್ಗೀಕರಿಸಲಾಗಿದೆ. ಆಯಾ
ವರ್ಣಗಳ ಬೇರೆ ಬೇರೆ ಜಾತಿಗಳವರ ಮಧ್ಯೆ ನಡೆದರೆ ಅದು ಅಂತರಜಾತೀಯ ವಿವಾಹ, ಹರಳಯ್ಯ ಮಧುವರಸರ
ಮಧ್ಯೆ ನಡೆದ ವೈವಾಹಿಕ ಸಂಬಂಧ ವರ್ಣಾಂತರ. ಅನುಲೋಮ ಎಂದರೆ ಕೆಳ ವರ್ಣದ ಹೆಣ್ಣು ಮೇಲು ವರ್ಣದ
ವರನನ್ನು ಮದುವೆಯಾದರೆ ಅದು ಸ್ವಲ್ಪ ಕ್ಷಮ್ಯ. ಅದಕ್ಕೆ ಬಹಿಷ್ಕಾರವೇ ಶಿಕ್ಷೆ. ಮೇಲು ವರ್ಗದ ಲಾವಣ್ಯ ಸಮಗಾರ
ಶೀಲವಂತನನ್ನು ವಿವಾಹವಾದುದು ವೈದಿಕ ಶಾಸ್ತ್ರದ ಪ್ರಕಾರ ಪ್ರತಿಲೋಮ ವಿವಾಹ. ಅಕ್ಷಮ್ಯ ಅಪರಾಧ, ಹೀಗಾಗಿ
ಆ ಶರಣರು ಮರಣದಂಡನೆ (ಎಳೆಹೂಟೆ) ಅನುಭವಿಸ ಬೇಕಾಯಿತು. ಬಸವಣ್ಣನವರು ಸಮಾನ ಧರ್ಮೀಯರ ಮಧ್ಯೆ
ಆದ ವಿವಾಹ ಎಂದರು; ವೈದಿಕರು ವರ್ಣಾಂತರ ವಿವಾಹ ಎಂದು ಗದ್ದಲ ಮಾಡಿದರು.

?. ಬಿ.ಎಂ.ಶಶಿಕಾಂತ, ದಾವಣಗೆರೆ
ಜಯದೇವ ಮುರುಘ ರಾಜೇಂದ್ರ ಮಹಾಸ್ವಾಮಿಗಳ
ದಾವಣಗೆರೆಯಲ್ಲಿ ಮಾರ್ಚ್ 1ರಂದು ಮುರುಘ ರಾಜೇಂದ್ರ
48ನೆಯ ಸ್ಮರಣೋತ್ಸವ ನಿಮಿತ್ತ ಬಸವ ಧರ್ಮ ಸಮಾವೇಶವನ್ನು ಶ್ರೀಗಳು ಕೆಲವು ಆಕ್ಷೇಪ
ಶರಣರು ಏರ್ಪಡಿಸಿದ್ದರು. ಅದರಲ್ಲಿ ಭಾಗವಹಿಸಿದ್ದ ಸಿರಿಗೆರೆ ಮೇಲೆ ಪ್ರಕಟವಾಯಿತು.
ಎತ್ತಿದರು. ಉಭಯತರ ವಿಚಾರ ಭಿನ್ನಾಭಿಪ್ರಾಯ ವೇದಿಕೆಯ ಈ ಬಗ್ಗೆ ತಮ್ಮ
ವಿಜಯ ಕರ್ನಾಟಕ ಪತ್ರಿಕೆಯ 2005 ಮಾರ್ಚ್ 2ರ ಪ್ರತಿಯನ್ನು ಕಳಿಸಿದ್ದೇನೆ.
ಅಭಿಪ್ರಾಯ ನೀಡಿರಿ ?

★ ಲಿಂಗಾಯತ ಮಠಾಧೀಶರದು ಸಾಮಾನ್ಯವಾಗಿ ಎಲ್ಲರದೂ ಒಂದೊಂದು ಅಭಿಪ್ರಾಯವಿರುತ್ತದೆ. ಅವರು
ನವಗ್ರಹಗಳಂತೆ; ಒಂಭತ್ತು ಗ್ರಹಗಳು ಒಂದೇ ಪೀಠದ ಮೇಲಿದ್ದರೂ ಒಂದೊಂದರ ಮುಖ ಒಂದೊಂದು ಕಡೆಗೆ!
ಹೇಗೆ ಪಕ್ಷಗಳಲ್ಲಿ ಭಿನ್ನಾಭಿಪ್ರಾಯ ಮೂಡಿ ಒಬ್ಬರಿಗೊಬ್ಬರು ಬಡಿದಾಡುತ್ತಿರವಾಗ ಪಕ್ಷದ ಮುಖಂಡರು ನಮ್ಮ
ಪಕ್ಷದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ ಎಂದು ಹೇಳುವರೋ ಹಾಗೆ ಲಿಂಗಾಯತ ಮಠಾಧೀಶರ ಭಿನ್ನಾಭಿಪ್ರಾಯಗಳು
ಬಸವಣ್ಣನವರ ವಿಚಾರ ಸ್ವಾತಂತ್ರ್ಯದ ಕುರುಹು ಎಂದು ನಾವೂ ಹೆಮ್ಮೆ ಪಡೋಣ. ಸಿರಿಗೆರೆ ಶ್ರೀಗಳು ಹೇಳಿದ
ಮಾತು, "ಬಸವ ಧರ್ಮದ ಸಂಸ್ಥಾಪಕರು ತಾವು ಎಂಬಂತೆ ಚಿತ್ರದುರ್ಗ ಶ್ರೀಗಳು ಬಿಂಬಿಸಿಕೊಳ್ಳುವುದು
ಸಮರ್ಥನೀಯವಲ್ಲ". ಎಂಬುದು ನೂರಕ್ಕೆ ನೂರು ಸತ್ಯ. ಬಸವ ಧರ್ಮ ಎಂಬ ಪದ ಪ್ರಯೋಗ ಶ್ರೀ
ಸಿದ್ಧರಾಮೇಶ್ವರರ ವಚನಗಳಲ್ಲೇ ಆಗಿದೆ. ಸಮಾನತೆ, ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ, ಪ್ರಗತಿಪರ ಚಿಂತನೆಯಿಂದ
ಕೂಡಿದ ಬಸವ ಧರ್ಮದ ಸ್ಥಾಪಕರು ಧರ್ಮಗುರು ಬಸವಣ್ಣನವರು. ಲಿಂಗಾಯತ ಧರ್ಮ ತಾತ್ತ್ವಿಕ ಪದ ;
ಬಸವಧರ್ಮ ಎಂಬುದು ಬಸವ ಸಂಸ್ಥಾಪಿತ ಲಿಂಗಾಯತ ಧರ್ಮಕ್ಕೆ ಇನ್ನೊಂದು ಪರ್ಯಾಯಪದ. ಶಿವಮೂರ್ತಿ
ಶರಣರು ಸಂಸ್ಥಾಪಿಸುತ್ತಿರುವ ಇಷ್ಟಲಿಂಗಧಾರಣೆಯ ನಂತರವೂ ಮಾಂಸಾಹಾರ ಮಾಡುವುದು,

Digitalized by e-Sahithya Documentation Forum
Sponsored by Sarayu Foundation Trust

ಜಾತಿ-ಉಪಜಾತಿಗೆ ಒಂದೊಂದು ಪೀಠಾಧಿಕಾರ ಇತ್ಯಾದಿ ಶಿವಮೂರ್ತಿ ಸ್ವಾಮಿಗಳ ಅಧರ್ಮ, ಕುಧರ್ಮವೇ ಹೊರತು ಬಸವ ಧರ್ಮವಲ್ಲ. ಆದರೆ ಸಿರಿಗೆರೆ ಶ್ರೀಗಳು ಹೇಳಿದ ಮಾತು, " ಬಸವಣ್ಣನವರು ಹೊಸ ಧರ್ಮ ಸ್ಥಾಪಿಸಲು ಹೊರಡಲಿಲ್ಲ. ಯಾರೇ ಹೊಸ ಧರ್ಮ ಸ್ಥಾಪಿಸಬೇಕಿದ್ದರೂ ಭಗವದ್ಗೀತೆ, ವೇದಗಳು, ಉಪನಿಷತ್ ಇವುಗಳನ್ನು ವ್ಯಾಖ್ಯಾನ ಮಾಡಿ, ಪ್ರತಿಪಾದಿಸಬೇಕು. ಆದರೆ ಬಸವಾದಿ ಶರಣರು ಇಂತಹ ವಾಖ್ಯಾನ ಮಾಡಿದವರಲ್ಲ" ಎಂದಿರುವ ಮಾತು ಸಿರಿಗೆರೆ ಶ್ರೀಗಳ ಅಜ್ಞಾನದ ಪರಮಾವಧಿಯನ್ನು ತೋರಿಸುತ್ತದೆ. ಅವರಿಗೆ ಅತ್ಯಂತ ಸಾಮಾನ್ಯವಾದ ಹಿಂದೂ ವ್ಯಾಖ್ಯೆಯೇ ತಿಳಿದಿಲ್ಲ ಎಂದು ಆಚ್ಚರಿಯಾಗುತ್ತದೆ.

ಬ್ರಹ್ಮಸೂತ್ರ, ಉಪನಿಷತ್ತು, ಗೀತೆ ಮುಂತಾದುವಕ್ಕೆ ವ್ಯಾಖ್ಯಾನ ಬರೆದು ವೈದಿಕ ಧರ್ಮವನ್ನು ಸಮರ್ಥಿಸಿಕೊಳ್ಳುವ ಆಚಾರ್ಯ ತ್ರಯರಾದ ಶಂಕರ, ಮಾಧ್ವ, ರಾಮಾನುಜರು. ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಪರ ಭಾಷ್ಯ ಬರೆದರು. ಆದರೆ ಅವರು ಆಚರಿಸಿದ ಸಮಾಜಶಾಸ್ತ್ರ ವೇದ ಪ್ರಣೀತ ವರ್ಣ, ಆಶ್ರಮ ಧರ್ಮ ವ್ಯವಸ್ಥೆ; ಹೀಗಾಗಿ ಅವರು ಮಠಾಚಾರ್ಯರಾದರೇ ವಿನಾ ಹೊಸ ಧರ್ಮ ಸಂಸ್ಥಾಪಕರಾಗರಲಿಲ್ಲ. ವೇದ, ಗೀತೆ, ಬ್ರಹ್ಮಸೂತ್ರಗಳ ಅಧಿಕೃತತೆಯನ್ನು, ಅವು ಅಪೌರುಷೇಯವೆಂಬುದನ್ನು ಜರಿದು ವೇದ ಶಾಸ್ತ್ರ ಆಗಮ ಪುರಾಣಗಳನ್ನು ಪರೀಕ್ಷೆಗೆ ಒಳಪಡಿಸಿ, ಅದರಿಂದ ಹೊರಬಂದು ಹೊಸ ಮಾರ್ಗವನ್ನು ಬಸವಣ್ಣನವರು ಹಾಕಿಕೊಟ್ಟರು .ಇದು ಹೊಸಧರ್ಮವಲ್ಲವೆ ? ಜಾತಿ ವರ್ಣ ಆಶ್ರಮ ಪದ್ಧತಿ ಒಪ್ಪದ , ಶೂದ್ರ ಅಸ್ಪೃಶ್ಯ ಸ್ತ್ರೀಯರಿಗೂ ದೀಕ್ಷಾ ಸಂಸ್ಕಾರ, ಮೋಕ್ಷದ ಹಕ್ಕು ಒದಗಿಸಿಕೊಟ್ಟು ಜೋತಿಷ್ಯ,ಜಾತಕವನ್ನೂ ನಂಬದ ಲಿಂಗಾಯತ ಧರ್ಮವು ಹೊಸ ಧರ್ಮವಲ್ಲವೆ ?ತಾವೇ ಸ್ವತಃ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳದ ಗುರುಗಳು ಜನರಿಗೆ ಎಷ್ಟರ ಬಗ್ಗೆ ಖಚಿತ ಜ್ಞಾನ ನೀಡಬಲ್ಲರು ? ಕ್ರೈಸ್ತ ,ಇಸ್ಲಾಂ ಅತ್ತಲಿರಲಿ, ಭಾರತದಲ್ಲೇ ಹುಟ್ಟಿದ ಬೌದ್ಧ, ಜೈನ, ಸಿಖ್ ಧರ್ಮಗಳು ಅಹಿಂದು ಅಂಕಣಕ್ಕೆ (column)ಕ್ಕೆ ಸೇರಲು ಪ್ರಮುಖ ಕಾರಣಗಳು :

1. ವೇದಗಳ ಪ್ರಾಮಾಣ್ಯ, ಅವು ಅಪೌರುಷೇಯ ಒಪ್ಪದೆ ಇರುವುದು
2. ಚತುರ್ವರ್ಣ ಜಾತಿ ವ್ಯವಸ್ಥೆ ಮನ್ನಿಸದಿರುವುದು
3. ಹಿಂದೂ ದೇವತೆಗಳನ್ನು ನಂಬದೆ, ಆರಾಧಿಸದೆ ಇರುವುದು
4. ಪಂಚ ಸೂತಕ ಮನ್ನಿಸದೆ ಇರುವುದು
5. ಜೋತಿಷ್ಯ ರಾಹು ಕಾಲ ಮುಂತಾದ್ದನ್ನು ನಂಬದೆ ಇರುವುದು
6. ಗಿಡ ಮರ ನೀರು ಮತ್ತು ಗೋವು ನಾಗರ ಮುಂತಾದ ಪ್ರಾಣಿಗಳ ಪೂಜೆ ಮಾಡದಿರುವುದು
7. ಎಲ್ಲ ಉದ್ಯೋಗ ಜಾತಿ-ಮತ-ಪಂಥಗಳವರಿಗೆ ದೀಕ್ಷಾ ಸಂಸ್ಕಾರ ಕೊಡುವುದು.

ಈ ಎಲ್ಲ ಅಂಶಗಳ ದೃಷ್ಟಿಯಿಂದ ಬಸವ ಸಂಸ್ಥಾಪಿತ ಲಿಂಗಾಯತವು ಹಿಂದು ಕಕ್ಷೆಯ ಹೊರಗೆ ನಿಲ್ಲುವ ಸ್ವತಂತ್ರಧರ್ಮ. ಜಾನಪದ ಕವಿಗಳೇ ಈ ಮಾತುಗಳ ಮೂಲಕ ಬಸವಣ್ಣನವರೇ ಲಿಂಗಾಯತ ಧರ್ಮ ಸ್ಥಾಪಕರು, ಇದು ಹೊಸಧರ್ಮ ಎಂದು ಘಂಟಾಘೋಷದಿಂದ ಹೇಳಿದ್ದಾರೆ.ಡಾ.ಬಿ.ಎಸ್. ಗದ್ದಗಿಮಠರ ಪಿಹೆಚ್.ಡಿ ಪ್ರಬಂಧ:

1. ಹೊಸಮತದ ಸೂರ್ಯನು ಉದಿಸಿದನು (ಮೇದಾರ ಕೇತಯ್ಯ-19)
2. ಕಂಭ ಬಸವೆಂದು ಹೊಸಮತಕ್ಕೆ ಕಲ್ಯಾಣ (ಮೇದಾರ ಕೇತಯ್ಯ-20)
3. ಉಚಿತ ಹೊಸಮತದ ಬೆಳೆ ಬಂತು (ಕಿನ್ನರಿ ಬೊಮ್ಮಣ್ಣ-64)
4. ಹುರಿಯಾಳು ಕಾಯೋ ಹೊಸಮತವ. (ಕಲ್ಯಾಣ ಬಸವಯ್ಯ-ತ್ರಿ-45)

ನಾವು ಅದಕ್ಕೆ ಒಂದು ನಿರ್ಧಾರಕ್ಕೆ ಬಂದಿದ್ದೇವೆ, ಮನ ಬುದ್ಧಿಗಳಲ್ಲಿ ಪೂರ್ವನಿರ್ಧಾರಿತ '(Predetermined) ಅಭಿಪ್ರಾಯ ಹೊಂದಿರುವ ಮಠಾಧೀಶರಿಗೆ ತತ್ತ್ವಗಳನ್ನು ತಿಳಿಸುವುದಕ್ಕಿಂತ ಜನ ಸಾಮಾನ್ಯರಿಗೆ ತಿಳಿಸುವುದೇ ಲೇಸು. ಎಂಬುದಾಗಿದೆ.

?. ಬಸವ ಶ್ರೀ ಬಾಣೂರು, ಶಿವಮೊಗ್ಗ
ಬಸವಣ್ಣ , ಬುದ್ಧ , ಮಹಾವೀರ, ಗುರುನಾನಕ್, ಮೊಹಮ್ಮದ್ ಪೈಗಂಬರ್ ಮತ್ತು ಏಸುಕ್ರಿಸ್ತರನ್ನು ಪ್ರವಾದಿಗಳೆಂದು, ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ ಮುಂತಾದವರನ್ನು ಆಚಾರ್ಯರೆಂದು ಕರೆಯಲಾಗುತ್ತದೆ ಏಕೆ? ಅನೇಕ ಮಠಾಧೀಶರನ್ನು ಶಿವಾಚಾರ್ಯರು ಎನ್ನಲಾಗುತ್ತಿದೆ. ಏನು ಇವುಗಳ ವ್ಯತ್ಯಾಸ ?

★ ಮೊದಲನೆಯ ಸಾಲಿನವರು ಹೊಸ ಧರ್ಮಗಳನ್ನು ಹುಟ್ಟುಹಾಕಿದವರು. ಹಿಂದಿನ ವ್ಯವಸ್ಥೆಯಲ್ಲಿದ್ದ ಲೋಪ ದೋಷಗಳನ್ನು ತೆಗೆದು ಹೊಸ ಪಥಗಳನ್ನು ಆರಂಭಿಸಿದವರು ಪ್ರವಾದಿಗಳು ಅಥವಾ ಧರ್ಮ ಸಂಸ್ಥಾಪಕರು. ಆಚಾರ್ಯರುಗಳೆಂದರೆ ಇರುವ ವ್ಯವಸ್ಥೆಯನ್ನು ಜನಪ್ರಿಯಗೊಳಿಸಲು ಬೌದ್ಧಿಕವಾದ ನೆಲೆಯಲ್ಲಿ ವ್ಯಾಖ್ಯಾನಗಳನ್ನು ರಚಿಸಿದವರು.

ಲಿಂಗಾಯತ ಸಮಾಜದಲ್ಲಿ ರೂಢಿಯಲ್ಲಿರುವ ಸ್ವಾಮಿಗಳು ಮತ್ತು ಶಿವಾಚಾರ್ಯ ಪದಗಳು ವಿರಕ್ತ ಮತ್ತು ಗುರುವರ್ಗದ ಮಠಾಧೀಶರನ್ನು ಸಂಕೇತಿಸುತ್ತವೆ. ಶಿವಾಚಾರ್ಯರೆಂಬ ನಾಮಾಂಕಿತದವರು ಶೈವ ಮೂಲದಿಂದ ಬಂದು ಲಿಂಗಾಯತ ಧರ್ಮವನ್ನು ಸ್ವೀಕರಿಸಿದವರು, ವಿರಕ್ತರಲ್ಲಿ ಜಂಗಮ ದೀಕ್ಷೆಗೂ ಪೂರ್ವದಲ್ಲಿ "ದೇವರು" ಎಂಬ ವಿಶೇಷಣವನ್ನು ಹೆಸರಿನ ಜೊತೆಗೆ ಹಚ್ಚುವರು. ಜಂಗಮ ದೀಕ್ಷೆ ಆದ ಬಳಿಕ ಸ್ವಾಮಿಗಳು ಎನ್ನುವರು. ಬಸವಾದಿ ಪ್ರಮಥರ ಕಾಲದಲ್ಲಿ ಬಸವರಾಜ ದೇವರು, ಪ್ರಭುದೇವರು, ಮಾಚಿದೇವರು ಹೀಗೆ ಸಂಬೋಧಿಸುವ ಪರಿಪಾಠ ಕಾಣುತ್ತೇವೆ. ಬಹುಶಃ ವ್ಯಕ್ತಿಗೆ ಗೌರವ ಕೊಡಲೋಸುಗ ಹೆಸರಿನ ಜೊತೆಗೆ ದೇವಾ, ದೇವರು ಸೇರಿಸುತ್ತಿರಬಹುದು. ಧರ್ಮಪಿತರ ವಚನ ವಾಕ್ಯ ಹೀಗಿದೆ,"ದೇವಾ, ಭಕ್ತಾ ಜಯಾ, ಜೀಯಾ ಎಂಬ ನುಡಿಯೊಳಗೆ ಕೈಲಾಸವಿದ್ದುದೆ." (ಬ.ವ.ದೀ.242).

?. ಇಷ್ಟಲಿಂಗ ನಿಷ್ಠೆ ಪಾಲಿಸಬೇಕು ಎನ್ನುವವರು ಸ್ಥಾವರಕ್ಕೆ ಹೋಗಬಾರದು ಎನ್ನುವುದು ಲಿಂಗಾಚಾರ. ಶರಣರ ಗದ್ದುಗೆಗಳು ಹಾಗಾದರೆ ಸ್ಥಾವರಗಳಲ್ಲವೆ ? ಅಲ್ಲಿಗೆ ನಾವು ಹೋಗಬೇಕೇ ಬೇಡವೇ ?

★ ಕ್ಷೇತ್ರಗಳಲ್ಲಿ ಎರಡು ಪ್ರಕಾರ ಸ್ಥಾವರ ಕ್ಷೇತ್ರ, ಜಂಗಮ ಕ್ಷೇತ್ರ ಎಂದು. ಶರಣರ ದೇಹವನ್ನು ಇಟ್ಟಂತಹವು ಜಂಗಮ ಕ್ಷೇತ್ರಗಳು. ಜಗತ್ತಿನಲ್ಲಿ ಅತ್ಯಂತ ಕಟ್ಟುನಿಟ್ಟಾಗಿ ಏಕದೇವ ವಿಶ್ವಾಸ (ನಮ್ಮದು ಏಕದೇವ ವಿಶ್ವಾಸ ಮಾತ್ರವಲ್ಲ ಇಲ್ಲಿ ಏಕದೇವ ಉಪಾಸನೆ ಸಹ ಇದೆ) ಹೊಂದಿರುವುದು ಇಸ್ಲಾಂ; ಮಸೀದಿ ಮತ್ತು ದರ್ಗಾ ಎಂಬ ಎರಡು ಶ್ರದ್ಧಾಕೇಂದ್ರಗಳು ಅಲ್ಲಿ ಉಂಟು. ಮಸೀದಿ ಪ್ರಾರ್ಥನೆ ಮಾಡುವ ಸ್ಥಳವಾದರೆ, ದರ್ಗಾಗಳು ಹಿಂದಿನ ಯಾರಾದರೂ ಮಹಾತ್ಮರ ಗದ್ದುಗೆಗಳು. ನಮ್ಮ ಧರ್ಮದಲ್ಲಿ ಗುರು -ಲಿಂಗ-ಜಂಗಮ ಎಂಬ ತ್ರಿವಿಧ ಶ್ರದ್ಧಾವಸ್ತುಗಳ ಉಪಾಸನೆಗೆ ಅನುಮತಿ ಇದೆ .ಗುರು- ಬಸವಣ್ಣ , ಲಿಂಗ-ಇಷ್ಟಲಿಂಗ, ಜಂಗಮ ಎಂದರೆ ಜೀವಂತವಿರುವ (ಧರ್ಮಪ್ರಚಾರಕರು ,ತ್ಯಾಗಿಗಳು, ಅನುಭಾವಿಗಳು ಇತ್ಯಾದಿ) ಜಂಗಮ ಮೂರ್ತಿಗಳು ಮಾತ್ರವಲ್ಲ ಲಿಂಗೈಕ್ಯರಾಗಿರುವ ಜಂಗಮ ಜ್ಯೋತಿಗಳು ಸಹ ಪೂಜಾರ್ಹರು . ಆದರಿಷ್ಟೇ ,ಅರ್ಚನೆಯು ತಾತ್ವಿಕವಾಗಿರಬೇಕು. ಇಷ್ಟಲಿಂಗಕ್ಕೆ ಪಂಚಾಮೃತ ಅಭಿಷೇಕ,ರುದ್ರಾಭಿಷೇಕ, ಶರಣರ ಗದ್ದುಗೆಗಳಿಗೆ ರುದ್ರಾಭಿಷೇಕ ಮುಂತಾಗಿ ಮಾಡಬಾರದು. ಗದ್ದುಗೆಗೆ ನಮಸ್ಕರಿಸುವಾಗ ನಮ್ಮ ಅಂಗದ ಮೇಲಿನ ಇಷ್ಟಲಿಂಗ ತೆಗೆದು ಅದಕ್ಕೆ ನಮಸ್ಕರಿಸುವ ಮೂಲಕ ಗದ್ದುಗೆಗೆ ಗೌರವ ಸಲ್ಲಿಸಬೇಕು.

?. ಕಲಾವತಿ, ಬೆಂಗಳೂರು
ಉತ್ತರ ಕರ್ನಾಟಕದ ಜನರು ವಿಳಾಸ ಬರೆಯುವಾಗ ,ಬೋರ್ಡ್‌ಗಳ ಮೇಲೆ ಬಿಜಾಪೂರ, ಸುರಪೂರ ಎಂದು ಬರೆಯುವದೇಕೆ ? ಇದು ತಪ್ಪಲ್ಲವೆ ?

★ ಅಲ್ಲೆಲ್ಲ ಮಳೆ ಕಡಿಮೆ ಬೀಳುವದು ,ಸದಾ ಬರಗಾಲಕ್ಕೆ ತುತ್ತಾಗುವರು.ಅದಕ್ಕೆ ಮಹಾಪೂರ (ಅರ್ಥಾತ್ ಪ್ರವಾಹವು) ಭೂಮಿಯ ಮೇಲೆ ಹರಿಯದಿದ್ದರೇನಂತೆ ಬೋರ್ಡ್‌ಗಳ ಮೇಲಾದರೂ ಹರಿಯಲಿ ಎಂದು 'ಪುರ'

Digitalized by e-Sahithya Documentation Forum
Sponsored by Sarayu Foundation Trust

ಎಂದರೆ ಪಟ್ಟಣ, ಇದಕ್ಕೆ ಬದಲಾಗಿ ಪೂರ ಎಂದು ತಪ್ಪು ಪ್ರಯೋಗ ಮಾಡುವರೇನೋ ! ಅವರು ಮಾಡುವ
ಇನ್ನೊಂದು ಪ್ರಮಾದ ಗೃಹ ಎಂಬುದನ್ನು ಗ್ರಹ ಎಂದು ಬಳಸುವುದು. ಗೃಹಸ್ಥ ಎನ್ನುವದಕ್ಕೆ ಗ್ರಹಸ್ಥ, ಅನುಗ್ರಹ
ಎಂಬಲ್ಲಿ ಅನುಗೃಹ ಎನ್ನುವುದು ; ಉಪಾಹಾರ ಗೃಹ ಎಂಬಲ್ಲಿ ಉಪಹಾರ ಗ್ರಹ ಎಂದು ಬರೆಯುವ ತಪ್ಪು
ಮಾಡುವರು. ವ್ರತದ ಬದಲು ವೃತ ಎಂದು ಬರೆಯುವರು. ಇನ್ನು ಬೆಳಗಾಂವಿ ಮತ್ತು ಬಿಜಾಪುರ ಜಿಲ್ಲೆಯ ಕೆಲವು
ಭಾಗಗಳವರು ಣ ಕಾರವನ್ನು ನ ಕಾರ ಎಂದು ತಪ್ಪು ಮಾಡಿದರೆ, ಹಳೆಯ ಮೈಸೂರಿನ ಮಂಡ್ಯ, ಮೈಸೂರ ಜಿಲ್ಲೆಯ
ಭಾಗಗಳವರು ಹಾಲನ್ನು ಆಲು ಮಾಡಿ, ಅರಳಿ ಮರವನ್ನು ಹರಳಿ ಮರ ಮಾಡುವರು. ಪಾಪ ! ಕನ್ನಡಾಂಬೆಯ
ಧರ್ಮ ಸಂಕಟ ಹೇಳ ತೀರದಷ್ಟು.

?. ಮಲ್ಲಿಕಾರ್ಜುನ ಬಿರಾದಾರ ,ಬೀದರ
ಒಬ್ಬರು ಉಪನ್ಯಾಸ ಮಾಡುತ್ತ ಕಾಲೇಜಿನ ಅಧ್ಯಾಪಕರು ಹೇಳಿದರು :
ಹೊಸ ಧರ್ಮಗಳನ್ನು ಸಂಸ್ಥಾಪನೆ ಮಾಡಿದ ಅನೇಕ ಪ್ರವಾದಿಗಳು ಹೊಸ ಧರ್ಮ
ಕೊಡುವ ಬದಲು ತಾವು ಹುಟ್ಟಿದ ಧರ್ಮದಲ್ಲೇ ಸುಧಾರಣೆ ತರಬಹುದಿತ್ತು.
ಉದಾ: ಬಸವಣ್ಣನವರು ತಾವು ಹುಟ್ಟಿದ ಧರ್ಮ ಬಿಟ್ಟು ಹೊಸದಾದ ಲಿಂಗಾಯತ
ಧರ್ಮವನ್ನು ಕೊಡುವ ಬದಲು ಅದರಲ್ಲೇ ಸುಧಾರಣೆ ಮಾಡಬಹುದಿತ್ತು. ಈ ಬಗ್ಗೆ
ತಮ್ಮ ಅಭಿಪ್ರಾಯ ವೇನು ?

★ ತಾವು ಹುಟ್ಟದಲ್ಲಿ ಸುಧಾರಣೆ ತರಲು ಸಾಧ್ಯವಿಲ್ಲ ಎಂಬ ಸ್ಥಿತಿ ಬಂದಾಗಲೇ ಮಹಾ ಪುರುಷರು
ಹೊಸದಾರಿಗಳನ್ನು ನಿರ್ಮಿಸುವುದು .ಜಗತ್ತಿನ ಯಾವುದೇ ಧರ್ಮದ ಹುಟ್ಟು ತೆಗೆದುಕೊಂಡರೂ ಸಂಸ್ಥಾಪಕರು
ಎಂಬ ಮಹಾನ್ ಚಿಂತಕರು ಮೊದಲು ಸುಧಾರಣೆಗೆ ಯತ್ನಿಸಿ, ಅದು ಸಾಧ್ಯವಿಲ್ಲ ಎನಿಸಿದಾಗಲೇ ಹೊಸ
ಧರ್ಮವನ್ನು ಕಟ್ಟುವರು. ಮಾನವ ಜನಾಂಗದ ಧಾರ್ಮಿಕ ಇತಿಹಾಸ ನೋಡಿದಾಗ ಇದು ಅರ್ಥವಾಗುವುದು.

?. ಊರ್ಮಿಳಾ ಗೌಳಿ ಮತ್ತು ಸಂಗಡಿಗರು ,ಗುಲಬರ್ಗಾ
ಮಾರ್ಚ ಕಲ್ಯಾಣ ಕಿರಣದಲ್ಲಿ ವೀರೇಶ ಎಂಬುವವರು ಪೂಜ್ಯ ಮಾತಾಜಿಯವರ
108 ನಾಮಾವಳಿ ಬರೆದಿದ್ದು ಪ್ರಕಟವಾಗಿದೆಯಲ್ಲವೆ ? ಇದನ್ನು ಈಗ ಓಂ ಶ್ರೀ
ಸೇರಿಸಿ ವೀರೇಶ ಅವರು ಬರೆದಿದ್ದಾರೆ. ಆದರೆ ನಾಲ್ಕಾರು ವರ್ಷಗಳ ಹಿಂದೆಯೇ ನನ್ನ
ಸ್ನೇಹಿತೆ ಕವಿತಾಂಬಿಕಾ ಜವಳಗಿ 201 ಮಂತ್ರಾವಳಿ ಬರೆದು ಶರಣ ಮೇಳದಲ್ಲಿ
ಹಾಡಿದ್ದಳು. ಇದು ಕೃತಿ ಚೌರ್ಯ; ಇದನ್ನೇಕೆ ಪ್ರಕಟಿಸಲಾಗಿದೆ ?

★ ಯಾರೇ ಬರೆದರೂ ಅದೇ ಪದಗಳನ್ನೇ ಬಳಸಬೇಕಲ್ಲವೆ? ಉದಾ: ಪ್ರಥಮ ಮಹಿಳಾ ಜಗದ್ಗುರು ಬಸವಾತ್ಮಜೆ,
ಸಚ್ಚಿದಾನಂದ ಪ್ರಿಯೆ ಹೀಗೆ ಪದಗಳನ್ನು ಬಳಸುತ್ತಾರೆ. ಅದು ಕೃತಿ ಚೌರ್ಯ ಹೇಗಾಗುತ್ತದೆ .? ಧಾರವಾಡದ
ಕಮಲಮ್ಮ ಗೋಧಿ , ಬಳ್ಳಾರಿಯ ರತ್ನಕ್ಕ ನಾಗನಗೌಡ , ಹೀಗೆ 3-4 ಜನ ಇದೇ ರೀತಿ ಬರೆದು ಕಳಿಸಿದ್ದರು.
ಸಂಪಾದಕ ಮಂಡಳಿಯವರು ಒಂದನ್ನು ಆಯ್ಕೆ ಮಾಡಿ ಹಾಕಿದ್ದಾರೆ ಅಷ್ಟೆ.

?. ಬಸವರಾಜ ಶೇಗುಣಸಿ, ಗದಗ್
ಗದುಗಿನ ತೋಂಟದಾರ್ಯ ಮಠದ ಆಶ್ರಯದಲ್ಲಿ ಲಿಂಗಾಯತ ಪ್ರಗತಿಶೀಲ ಸಂಘ
(ಮೊದಲು ಇದು ವೀರಶೈವ ಪ್ರ.ಸಂ ಎಂದಿತ್ತು. ಬದಲಾವಣೆಯನ್ನು ತಾವು
ಸ್ವಾಗತಿಸಿದ್ದೀರಿ.)ದ ಪ್ರಗತಿಯ ಪಕ್ಷಿ ನೋಟ ಎಂಬ ವಿಶೇಷ ಸಂಚಿಕೆ ಕಳಿಸಿದ್ದೇನೆ. ಇದರಲ್ಲಿ
1625 ನೇ ಶಿವಾನುಭವದಿಂದ 1684 ರವರೆಗಿನ ವಿವರವಿದೆ.ದಿ 24-11-2003 ರಿಂದ
10-1-2005 ರ ವರೆಗಿನ ಪ್ರತಿ ಸೋಮವಾರದ ಶಿವಾನುಭವದ ಕಾರ್ಯಸೂಚಿ
ಇದೆ; ಅದರಲ್ಲಿ ಶ್ರೀ ಸಿದ್ಧಯ್ಯ ಪುರಾಣಿಕರ "ವಚನೋಧ್ಯಾನ" ದ ಬಗ್ಗೆ ಪ್ರವಚನಗಳಿವೆ.
ಪ್ರವಾದಿ ಮೊಹಮ್ಮದ್ ಪೈಗಂಬರ್ ಕುರಿತು (ದಿ.4-10-2004) ಉಪನ್ಯಾಸ, ಪುಸ್ತಕ

ಕಿರುಪರಿಚಯ(ದಿ.3-1-2005)ಇದೆ.ಶಿವಾನುಭವಕ್ಕೆ
ಬಿಡುಗಡೆ ಇದೆ.ಕ್ರೈಸ್ತತ್ವ- ಒಂದು
ಇವೆಲ್ಲ ಹೊಂದಿಕೆಯಾಗುವ ವಿಷಯಗಳೆ?

★ ವ್ಯಾಪಾರಿ ವೃಂದದವರೇ ಏರ್ಪಡಿಸುವ ಕಾರ್ಯಕ್ರಮಕ್ಕೆ ವಚನೋದ್ಯಾನ, ವಚನೋಧ್ಯಾನದ ವ್ಯತ್ಯಾಸ
ಗೊತ್ತಿಲ್ಲದೆ ಅಧ್ವಾನ ಮಾಡಿದ್ದಾರೆ; ಕ್ಷಮಿಸಿ ಬಿಡಿರಿ . ಇಡೀ ಕಾರ್ಯಕ್ರಮಗಳ ಪಟ್ಟಿ ನೋಡಿದರೆ ವಚನ
ಸಾಹಿತ್ಯ-ಲಿಂಗಾಯತ ಧರ್ಮಕ್ಕೆ ಸಂಬಂಧಿಸಿ 10% ಸ್ಥಾನವಿಲ್ಲ.ಪೂಜ್ಯ ಶ್ರೀಗಳು ಉದಾರ ಹೃದಯಿ; ತನ್ನ ಧರ್ಮ
ಹೇಗಿದ್ದರೂ ದುರ್ಬಲಗೊಳ್ಳುತ್ತಿದೆ;ಅದನ್ನು ಪೋಷಿಸಿ ಹಣ ಮತ್ತು ಸಮಯವನ್ನು ಏಕೆ ವ್ಯರ್ಥ
ಮಾಡಬೇಕು? ಇಸ್ಲಾಂ, ಕ್ರೈಸ್ತ ಧರ್ಮಗಳು ಬಲಿಷ್ಠವಾಗಿ ಬೆಳೆಯುತ್ತಿರುವ ಧರ್ಮಗಳು ಅವುಗಳ ಪ್ರಚಾರ
ಮಾಡಿದರೆ ಸಮಯ -ಹಣ ಸಾರ್ಥಕವಾಗುತ್ತದೆ ಎಂಬ ಉದಾರ ಚಿಂತನೆ ಹೊಂದಿರಬಹುದೇನೋ!!

?. ಸೋಮಶೇಖರಯ್ಯ, ಎಳನಡು.
ಕೆಲವರನ್ನು ಮಹಾತ್ಮರು, ಸಿದ್ಧಪುರುಷರು ಎಂದು ಪ್ರಚಾರ ಮಾಡುತ್ತಾರೆ, ಅವರು ಭಂಗಿ
ಸೇದುವುದು, ಸಾರಾಯಿ ಕುಡಿಯುವುದು ಮಾಡುತ್ತಾರೆ. ಇದು ಧರ್ಮ ಸಮ್ಮತವೇ ?

★ ಬಸವಾದಿ ಪ್ರಮಥರು ಅನಾಚಾರವನ್ನು ಎಂದೂ ಒಪ್ಪುವುದಿಲ್ಲ. ಆಚಾರವಿಡಿದು ಗುರು, ಆಚಾರವಿಡಿದು ಭಕ್ತ ಶರಣ,
ಜಂಗಮ. ಆಚಾರವಿಲ್ಲದಿದ್ದರೆ ಗುರುವಲ್ಲ ನರ, ಭಕ್ತನಲ್ಲ ಭವಿ, ಶರಣನಲ್ಲ ಹುಚ್ಚ ಜಂಗಮವಲ್ಲ ವೇಷಧಾರಿ
ಎನ್ನುತ್ತಾರೆ. ಭಂಗಿ ಬಿಡಲಾರದ, ಸಾರಾಯಿ ಚಟ ತೊರೆಯದ ಮನೋನಿಗ್ರಹವಿಲ್ಲದವರು ಅದೆಂತು
ಸಿದ್ಧಪುರುಷರಾಗಬಲ್ಲರು ? ಧೂರ್ತರು ಹೀಗೆ ಪ್ರಚಾರ ಮಾಡುತ್ತಾರೆ, ಮೂರ್ಖರು ನಂಬಿ ಅಂಥ
ಅನಾಚಾರಿಗಳನ್ನು ಸಿದ್ಧಪುರುಷರೆಂದು ಆರಾಧಿಸುತ್ತಾರೆ ಅಷ್ಟೆ !

?ಚಂದ್ರಶೇಖರ್ ಪಾಟೀಲ್, ಹುಬ್ಬಳ್ಳಿ
ಹುಬ್ಬಳ್ಳಿಯಲ್ಲಿ ದಿ.10ರಂದು ಹಿಂದು ಭವನ ಉದ್ಘಾಟನೆ ನೆರವೇರಿತು ಅದರಲ್ಲಿ ಮುಖ್ಯ
ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ಅಶೋಕ ಸಿಂಘಾಲ್ ಅವರು ಹಿಂದುಗಳು ಕುಟುಂಬ
ನಿಯಂತ್ರಣ ಮಾಡಬೇಕಿಲ್ಲ ಎಂದು ಕರೆ ನೀಡಿದರು. ಇದು ಸರಿಯೆ ?

★ ಖಂಡಿತವಾಗಿಯೂ ಸರಿ. ಏಕೆಂದರೆ ಭಾರತೀಯ ಮೂಲದ ಧರ್ಮಗಳವರು ಕುಟುಂಬ ನಿಯಂತ್ರಣ
ಮಾಡಿಕೊಳ್ಳುವರು ಎಂದುಕೊಳ್ಳುವಾ. ಕ್ರೈಸ್ತರು ಭ್ರೂಣ ಹತ್ಯೆಗೆ ಅವರ ಧರ್ಮ ಅವಕಾಶ ಕೊಡುವುದಿಲ್ಲವೆಂದು,
ಮುಸ್ಲೀಮರು ಸಂಖ್ಯೆಯು ಪ್ರಜಾಪ್ರಭುತ್ವದಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆಂದು, ಹಲವಾರು
